12.30 P.M

ಕರ್ನಾಟಕ ವಿಧಾನಸಭೆ

ಬೆಳಗಾವಿ

ಸೋಮವಾರ ದಿನಾಂಕ 25ನೇ ಸೆಪ್ಟೆಂಬರ್ 2006ರಂದು

ಸದನವು ಬೆಳಗಾವಿಯ ಜವಾಹರಲಾಲ್ ನೆಹರು ವೈದ್ಯಕೀಯ

ವಿದ್ಯಾಲಯದ ಆವರಣದಲ್ಲಿರುವ

ಡಾ:ಬಿ.ಎಸ್.ಜೀರಿಗೆ ಸಭಾಂಗಣದಲ್ಲಿ

ಬೆಳಿಗ್ಗೆ 12 ಗಂಟೆ 38 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣ)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಸನ್ಮಾನ್ಯ ಸಭಾಧ್ಯಕ್ಷರಿಂದ ಬೆಳಗಾವಿಯ ಅಧಿವೇಶನಕ್ಕೆ ಸ್ವಾಗತ

ಅಧ್ಯಕ್ಷರು : ಪ್ರಪ್ರಥಮವಾಗಿ ಕೇಂದ್ರಸ್ಥಾನದಿಂದ ಹೊರಗಡೆ ವಿಧಾನ ಸಭೆಯ ಅಧಿವೇಶನ ನಡೆಯುತ್ತಿದೆ. ಸದನದಲ್ಲಿ ಉಪಸ್ಥಿತರಿರುವ ಎಲ್ಲಾ ಮಾನ್ಯ ಸದಸ್ಯರುಗಳನ್ನು ಹಿರಿಯ ಅಧಿಕಾರಿಗಳನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇನೆ.

(ಈ ಹಂತದಲ್ಲಿ ಎಂ.ಇ.ಎಸ್ ಸದಸ್ಯರು ಮರಾಠಿ ಭಾಷೆಯಲ್ಲಿ ಘೋಷಣೆ ಕೂಗುತ್ತಿದ್ದರು.)

(ಅಡಚಣೆ)

ಅಧ್ಯಕ್ಷರು : ಈ ಅಧಿವೇಶನದ ಕಾರ್ಯಕಲಾಪಗಳನ್ನು ನೇರವಾಗಿ ಪ್ರಸಾರ ಮಾಡಲಿಕ್ಕೆ ದೂರದರ್ಶನ, ಉದಯ ಟಿ.ವಿ, ಈ.ಟಿ.ವಿ. ಚಾನೆಲ್‌ಗಳಿಗೆ ಅವಕಾಶವನ್ನು ನಾನು ಮಾಡಿಕೊಟ್ಟಿದ್ದೇನೆ.

(ಈ ಹಂತದಲ್ಲಿ ಕನ್ನಡ ವಾಟಾಳ್ ಪಕ್ಷದ ಮುಖಂಡರಾದ ಶ್ರೀ ವಾಟಾಳ್ ನಾಗರಾಜ್‌ರವರು ದಿನಾಂಕ 4.10.2006ರಂದು ಕೇಂದ್ರ ಸರ್ಕಾರದ ವಿರುದ್ಧ ಕರ್ನಾಟಕ ರಾಜ್ಯಾದ್ಯಂತ ಬಂದ್ ಎಂದು ಬರೆದಿರುವ ಕಪ್ಪು ಬ್ಯಾನರ್ ಅನ್ನು ಸದನದಲ್ಲಿ ಪ್ರದರ್ಶಿಸುತ್ತಿದ್ದರು. ಇದಕ್ಕೆ ಎಂ.ಇ.ಎಸ್. ಸದಸ್ಯರಿಂದ ಪ್ರತಿಭಟನೆ)

(ಅಡಚಣೆ)

2. ಸಂತಾಪ ಸೂಚನೆಗಳು

ಅಧ್ಯಕ್ಷರು: ಈಗ ಸಂತಾಪ ಸೂಚನೆಯನ್ನು ಮಂಡಿಸುತ್ತಿದ್ದೇನೆ.

(ಅಡಚಣೆ)

ಅಧ್ಯಕ್ಷರು : ಭಾರತರತ್ನ ಶ್ರೀ ಉಸ್ತಾದ್ ಬಿಸ್ಮಿಲ್ಲಾ ಖಾನ್, ಕರ್ನಾಟಕದ ಮಾಜಿ ರಾಜ್ಯಪಾಲರು ಹಾಗೂ ಕೇಂದ್ರದ ಮಾಜಿ ಸಚಿವರಾಗಿದ್ದ ಶ್ರೀ ಭಾನು ಪ್ರತಾಪ್ ಸಿಂಗ್, ಮಾಜಿ ಸಚಿವರಾದ ಶ್ರೀ ಜಿ. ಪುಟ್ಟಸ್ವಾಮಿಗೌಡ ಹಾಗೂ

ಶ್ರೀ ಎಲ್.ಜಿ. ಹಾವನೂರ್, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ.ಡಿ.ಶಿವಪುರ, ಶ್ರೀ ಎಸ್.ಎಂ.ಗುರಡ್ಡಿ, ಶ್ರೀ ಸೋಮಲಿಂಗಪ್ಪ, ಹೆಚ್.ನಲವಾಗಲ, ಶ್ರೀಗೋವಿಂದರಾವ್ ಮಾನವಿ..

(ಅಡಚಣೆ)

Sri R.V. Desh Pande: Please, restore the House in order. ಈ ಮನೆಯನ್ನು ಸರಿಯಾಗಿ ನಡೆಸುವ ವ್ಯವಸ್ಥೆ ಮಾಡಬೇಕು. ನಂತರ ಈ ವಿಚಾರಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು.

(ಅಡಚಣೆ)

ಅಧ್ಯಕ್ಷರು : ಈಗ ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು. ಸಂತಾಪಸೂಚನೆಯನ್ನು ನಡೆಸಲಿಕ್ಕೆ ಅವಕಾಶ ಮಾಡಿಕೊಡಿ.

(ಅಡಚಣೆ)

ಅಧ್ಯಕ್ಷರು : ಈ ರೀತಿ ಸಭೆಗೆ ಅಡ್ಡಿ ಉಂಟು ಮಾಡಿದವರನ್ನು ಹೊರ ಹಾಕಬೇಕಾಗುತ್ತದೆ. ಇದು ಯಾರಿಗೂ ಗೌರವ ತರುವುದಿಲ್ಲ. ದಯಮಾಡಿ ಎಲ್ಲರೂ ಕುಳಿತು ಕೊಳ್ಳಬೇಕು.

(ಅಡಚಣೆ)

ಅಧ್ಯಕ್ಷರು : ಶ್ರೀ ಬಿ.ಕೆ. ಪುಟ್ಟಯ್ಯ, ಶ್ರೀ ನಡಾಫ್ ಮಹಮದ್ ಸಾಬ್ ಮದ್ರಾನ್‌ಸಾಬ್ ಹಾಗೂ ಶ್ರೀ ವೆಂಕನಗೌಡ ಪಾಟೀಲ್, ರಾಜ್ಯದ ಗಣ್ಯ ವ್ಯಕ್ತಿಗಳಾದ ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಶ್ರೀ ಎಸ್.ಕೆ. ಕರೀಂಖಾನ್, ಶ್ರೀಮತಿ ಮಹದೇವಿ ತಾಯಿ ಹಾಗೂ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಮಾಲೆಗಾಂವ್‌ನಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ಅಮಾಯಕರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

(ಈ ಹಂತದಲ್ಲಿ ಮತ್ತೆ ವಾಟಾಳ್ ನಾಗರಾಜ್ ರವರು ಮತ್ತೆ ಕೇಂದ್ರ ಸರ್ಕಾರದ ನೀತಿಯ ವಿರುದ್ಧ ರಾಜ್ಯವ್ಯಾಪ್ತಿ ಕರ್ನಾಟಕ ಬಂದ್ ಆಚರಿಸಲಾಗುವುದು, ಎಂ.ಇ.ಎಸ್.ಗೆ ಧಿಕ್ಕಾರ, ಎಂ.ಇ.ಎಸ್.ಗೆ ಧಿಕ್ಕಾರ ಎಂದು ಕಪ್ಪು ಬ್ಯಾನರ್ ಪ್ರದರ್ಶಿಸಿದರು. ಈ ಮಧ್ಯೆ ಎಂ.ಇ.ಎಸ್. ನವರು ಘೋಷಣೆಗಳನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು.)

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ಈ ಸದನದಲ್ಲಿ ಶ್ರದ್ಧಾಂಜಲಿ ಅರ್ಪಿಸಲಿಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು.

(ಅಡಚಣೆ)

ಶ್ರೀ ಎನ್. ಚೆಲುವರಾಯಸ್ವಾಮಿ : ಈ ರೀತಿಯಾದರೆ ಸದನದಲ್ಲಿ ತಾವು ಸರಿಯಾದ ಕ್ರಮ ತೆಗೆದುಕೊಳ್ಳಬೇಕು.

(ಅಡಚಣೆ)

(ಕಾಂಗ್ರೆಸ್ ಪಕ್ಷದ ಹಲವು ಸದಸ್ಯರು ಸದನದಲ್ಲಿ ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ಈ ರೀತಿಯ ಅರಾಜಕತೆಯಿದ್ದರೆ ಈ ಸದನವನ್ನು ಹೇಗೆ ನಡೆಸುತ್ತೀರಿ?

(ಅಡಚಣೆ)

ಅಧ್ಯಕ್ಷರು : ಮಾನ್ಯ ಸದಸ್ಯರೆಲ್ಲಾ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ.ಮಲ್ಲಿಕಾರ್ಜುನ್ ಖರ್ಗೆ : ಈ ಸದನವನ್ನು ಶಾಂತಿಯುತವಾದ ರೀತಿಯಲ್ಲಿ ನಡೆಸಬೇಕು, ನಾವು ಬೆಳಗಾವಿ ಅಧಿವೇಶನಕ್ಕೆ ಆಸಕ್ತಿ ವಹಿಸಿ ಮಾತನಾಡಲಿಕ್ಕೆ ಬಂದಿದ್ದೇವೆ. ಎಂ.ಇ.ಎಸ್. ಸದಸ್ಯರು ಹೊರಗೆ ಹೋಗಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಪದೇ ಪದೇ ಈ ರೀತಿ ಪ್ರಚಾರಕ್ಕೋಸ್ಕರ ಪ್ರತಿಭಟಿಸುತ್ತಿದ್ದಾರೆಂದು ಭಾವಿಸಬೇಕಾಗುತ್ತದೆ.

(ಅಡಚಣೆ)

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿ ಮತ್ತೆ ಸದನಕ್ಕೆ ಹಾಜರಾದರು)

(ಅಡಚಣೆ)

ಅಧ್ಯಕ್ಷರು : ದಯಮಾಡಿ ಎಲ್ಲಾ ಸದಸ್ಯರು ಸಹಕರಿಸಿ ಎಲ್ಲರೂ ಕುಳಿತುಕೊಳ್ಳಬೇಕು.

(ಅಡಚಣೆ)

ಅಧ್ಯಕ್ಷರು : ಈಗ ಮಾನ್ಯ ಸದಸ್ಯರು ದಯಮಾಡಿ ಗೌರವದಿಂದ ನಡೆದುಕೊಳ್ಳಬೇಕು. ಈ ರೀತಿ ಮಾಡಿದರೆ ಈ ಸದನದ ಯಾವ ಸದಸ್ಯರಿಗೂ ಗೌರವ ತರತಕ್ಕದ್ದಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು. ಈ ದೇಶಕ್ಕೋಸ್ಕರ, ಈ ರಾಜ್ಯಕ್ಕೋಸ್ಕರ ತ್ಯಾಗ ಮಾಡಿ ದುಡಿದು ಮಡಿದಿರುವ ಗಣ್ಯವ್ಯಕ್ತಿಗಳಿಗೆ ಸಂತಾಪ ಸೂಚನೆಯನ್ನು ಮಾಡುತ್ತಿದ್ದೇವೆ, ತಾವು ಈ ರೀತಿ ವರ್ತಿಸಿದರೆ ಹೇಗೆ? ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಭಾರತ ರತ್ನ ಶ್ರೀ ಉಸ್ತಾದ್ ಬಿಸ್ಮಿಲ್ಲಾ ಖಾನ್, ಕರ್ನಾಟಕ ಮಾಜಿ ರಾಜ್ಯಪಾಲರು ಹಾಗೂ ಕೇಂದ್ರದ ಮಾಜಿ ಸಚಿವರಾಗಿದ್ದ ಶ್ರೀ ಭಾನುಪ್ರತಾಪ್ ಸಿಂಗ್, ಮಾಜಿ ಸಚಿವರಾದ ಶ್ರೀ ಜಿ. ಪುಟ್ಟಸ್ವಾಮಿಗೌಡ ಹಾಗೂ

ಶ್ರೀ ಎಲ್.ಜಿ.ಹಾವನೂರ್, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ.ಡಿ.ಶಿವಪುರ, ಶ್ರೀ ಎಸ್.ಎಂ.ಗುರಡ್ಡಿ, ಶ್ರೀ ಸೋಮಲಿಂಗಪ್ಪ, ಹೆಚ್. ನಲವಾಗಲ, ಶ್ರೀ ಗೋವಿಂದರಾವ್ ಮಾನವಿ, ಶ್ರೀ ಬಿ.ಕೆ. ಪುಟ್ಟಯ್ಯ, ಶ್ರೀ ನಡಾಫ್ ಮಹಮದ್ ಸಾಬ್ ಮದ್ರಾನ್‌ಸಾಬ್ ಹಾಗೂ ಶ್ರೀ ವೆಂಕನಗೌಡ ಪಾಟೀಲ್, ರಾಜ್ಯದ ಗಣ್ಯ ವ್ಯಕ್ತಿಗಳಾದ ಶ್ರೀ ಮತಿಘಟ್ಟ ಕೃಷ್ಣಮೂರ್ತಿ, ಶ್ರೀಎಸ್.ಕೆ.ಕರೀಂ ಖಾನ್, ಶ್ರೀಮತಿ ಮಹದೇವಿ ತಾಯಿ ಹಾಗೂ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಮಾಲೆಗಾಂವ್‌ನಲ್ಲಿ ನಡೆದ ಬಾಂಬ್ ಸ್ಫೋಟದಲ್ಲಿ ಅಮಾಯಕರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಉಸ್ತಾದ್ ಬಿಸ್ಮಿಲ್ಲಾ ಖಾನ್

ಭಾರತ ರತ್ನ, ಶಹನಾಯ್ ಮಾಂತ್ರಿಕ, ಶಹನಾಯ್ ವಾದ್ಯಕ್ಕೆ ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ಪ್ರಮುಖ ಸ್ಥಾನ ತಂದುಕೊಟ್ಟ ವಿದ್ವಾಂಸ ಶ್ರೀ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರು 1916ರ ಮಾರ್ಚ್ 21ರಂದು ಬಿಹಾರದ ಧುಮ್ರಾಂವ್‌ನಲ್ಲಿ ಜನಿಸಿದ್ದರು. 1947ರ ಆಗಸ್ಟ್ 15ರಂದು ಭಾರತದ ಸ್ವಾತಂತ್ರ್ಯ ಗಳಿಕೆಯ ಸಂಕೇತವಾಗಿ ಪಂಡಿತ್ ಜವಹರ್‌ಲಾಲ್ ನೆಹರು ಅವರು ಕೆಂಪುಕೋಟೆಯ ಮೇಲೆ ತ್ರಿವರ್ಣ ರಾಷ್ಟ್ರ ಧ್ವಜಾರೋಹಣ ಮಾಡಿದ ಮೇಲೆ ಶ್ರೀ ಬಿಸ್ಮಿಲ್ಲಾ ಖಾನ್ ಅವರು ಶಹನಾಯ್ ನಾದ ಧಾರೆಯನ್ನು ಹರಿಸಿದ್ದರು. ದೇಶ ವಿದೇಶಗಳಲ್ಲಿ ಜನಪ್ರಿಯರಾಗಿದ್ದ ಶ್ರೀಯುತರು ಹಿಂದುಸ್ಥಾನಿ ಶೈಲಿಯ ವಾದ್ಯ ವಾದಕರಲ್ಲಿ ಅಗ್ರಮಾನ್ಯರಾಗಿದ್ದರೂ ಸಹ ಅತ್ಯಂತ ಸರಳ ಜೀವನ ನಡೆಸುತ್ತಿದ್ದರು. 1956ರಲ್ಲಿ ಸಂಗೀತ ನಾಟಕ ಅಕಾಡಮಿ ಪ್ರಶಸ್ತಿ, ತಾನ್‌ಸೇನ್ ಪ್ರಶಸ್ತಿ, 1961ರಲ್ಲಿ ಪದ್ಮಶ್ರೀ, 1968ರಲ್ಲಿ ಪದ್ಮಭೂಷಣ, 1980ರಲ್ಲಿ ಪದ್ಮವಿಭೂಷಣ, 2001ರಲ್ಲಿ ಭಾರತದ ಅತ್ಯುನ್ನತ ನಾಗರೀಕ ಪುರಸ್ಕಾರವಾದ ಭಾರತ ರತ್ನ ಪ್ರಶಸ್ತಿಗಳಲ್ಲದೆ ಬನಾರಸ್ ಹಿಂದೂ ವಿಶ್ವವಿದ್ಯಾಲಯ ಹಾಗೂ ಶಾಂತಿನಿಕೇತನ ದಿಂದ ಗೌರವ ಡಾಕ್ಟರೇಟ್‌ನ್ನು ಪಡೆದಿದ್ದರು. ಕನ್ನಡಿಗರ ಪಾಲಿಗೆ ಡಾ:ರಾಜ್‌ಕುಮಾರ್ ಅವರ "ಸನಾದಿ ಅಪ್ಪಣ್ಣ" ಚಿತ್ರದ ಮೂಲಕ ವಿಶೇಷ ನಂಟು ಬೆಳೆಸಿದ್ದರು. ಶ್ರೀಯುತರ ನಿಧನದಿಂದ ರಾಷ್ಟ್ರ ಅಪೂರ್ವ ಕಲಾವಿದರೊಬ್ಬರನ್ನು ಕಳೆದುಕೊಂಡಿದೆ.

ಶ್ರೀಯುತರು ದಿನಾಂಕ 21.8.2006ರಂದು ನಿಧನ ಹೊಂದಿದರು.

2. ಶ್ರೀ ಭಾನು ಪ್ರತಾಪ್ ಸಿಂಗ್

ಕರ್ನಾಟಕ ಮಾಜಿ ರಾಜ್ಯಪಾಲರಾದ ಶ್ರೀ ಭಾನುಪ್ರತಾಪ್ ಸಿಂಗ್ ರವರು 1917ನೇ ಆಗಸ್ಟ್ 10ರಂದು ಉತ್ತರ ಪ್ರದೇಶದ ಬುಲಂದರ್ ಶಹರ್‌ನಲ್ಲಿ

ಜನಿಸಿದ್ದು, ತುರ್ತುಪರಿಸ್ಥಿತಿ ಅವಧಿಯಲ್ಲಿ ಜೈಲುವಾಸ ಅನುಭವಿಸಿದ್ದರು. ಭಾರತೀಯ ಕ್ರಾಂತಿದಳದ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಕೇಂದ್ರದ ಸಚಿವರಾಗಿಯೂ ಹಾಗೂ 1990ರ ಮೇ 8 ರಂದು 1991ರ ಜನವರಿ 6ರ ವರೆಗೆ ರಾಜ್ಯದ ರಾಜ್ಯಪಾಲರಾಗಿ ಸೇವೆಸಲ್ಲಿಸಿದ್ದರು. 1990ರ ಅಕ್ಟೋಬರ್ 10 ರಿಂದ 17ರ ವರೆಗೆ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿ ಮಾಡಿದ್ದರು.

ಶ್ರೀಯುತರು ದಿನಾಂಕ 20.8.2006 ರಂದು ನಿಧನ ಹೊಂದಿದರು.

3. ಶ್ರೀ ಜಿ. ಪುಟ್ಟಸ್ವಾಮಿಗೌಡ

ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾದ ಶ್ರೀ ಜಿ.ಪುಟ್ಟಸ್ವಾಮಿಗೌಡ ಅವರು 1935ರ ಡಿಸೆಂಬರ್ 20 ರಂದು ಹೊಳೆನರಸೀಪುರ ತಾಲ್ಲೂಕು ಕೆರೆಗೋಡು ಗ್ರಾಮದಲ್ಲಿ ಜನಿಸಿದ್ದು, ಸ್ನಾತಕೋತ್ತರ ಪದವೀಧರರು. ಎಲ್.ಐ.ಸಿ. ಏಜೆಂಟರಾಗಿ ವೃತ್ತಿ ಜೀವನ ಆರಂಭಿಸಿದ್ದ ಶ್ರೀಯುತರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ, ಕೆರಗೋಡು ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾಗಿ, ಹೊಳೆನರಸೀಪುರ ತಾಲ್ಲೂಕು ಮಂಡಳಿಯ ಅಧ್ಯಕ್ಷರಾಗಿ ಹಾಸನ ಜಿಲ್ಲಾ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಹೊಳೆನರಸೀಪುರ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಸಂಘದ ನಿರ್ದೇಶಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. 1978ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ, 1989ರಲ್ಲಿ ಒಂಭತ್ತನೇ ವಿಧಾನಸಭೆಗೆ ಹೊಳೆನರಸೀಪುರ ಕ್ಷೇತ್ರದಿಂದ ಚುನಾಯಿತರಾಗಿ ನೀರಾವರಿ, ಲೋಕೋಪಯೋಗಿ, ಇಂಧನ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳ ಸಚಿವರಾಗಿ ಹಾಗೂ 1990ರಲ್ಲಿ ಹಾಸನ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 18.8.2006ರಂದು ನಿಧನ ಹೊಂದಿದರು.

4. ಶ್ರೀ ಎಲ್.ಜಿ.ಹಾವನೂರ್

ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಲಕ್ಷ್ಮಣ್ ಜಿ. ಹಾವನೂರ್ ಅವರು 1927ರ ಮಾರ್ಚ್ 24ರಂದು ರಾಣೆಬೆನ್ನೂರಿನಲ್ಲಿ ಜನಿಸಿದ್ದು, ವೃತ್ತಿಯಲ್ಲಿ ವಕೀಲರು ಹಾಗೂ ಸಮಾಜ ಸೇವಕರಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿ "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ರಾಣೆಬೆನ್ನೂರು ಪುರಸಭೆಯ ಉಪಾಧ್ಯಕ್ಷರಾಗಿ, ಬೆಂಗಳೂರಿನ ಕಾನೂನು ವಿದ್ಯಾಲಯದ ಉಪ

ಪ್ರಾಧ್ಯಾಪಕರಾಗಿ, ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಸರ್ಕಾರಿ ವಕೀಲರಾಗಿ, ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ, ಅಖಿಲ ಭಾರತ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿ, 1991ರಲ್ಲಿ ದಕ್ಷಿಣ ಆಫ್ರಿಕಾದ ಹೊಸ ಸಂವಿಧಾನ ಕರಡು ರೂಪಿಸಲು ರಚಿಸಲಾಗಿದ್ದ ಸಮಿತಿಗೆ ಆಹ್ವಾನಿತರಾಗಿ, ಆ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿದ್ದರು. ವಿದೇಶಗಳಲ್ಲಿ ನಡೆದ ಹಲವಾರು ಕಾನೂನು ಸಮ್ಮೇಳನಗಳಲ್ಲಿ ಪಾಲ್ಗೊಂಡಿದ್ದ ಶ್ರೀಯುತರು ಹಿಂದುಳಿದ ವರ್ಗಗಳನ್ನು ಗುರುತಿಸಲು ನೀಡಿದ ಸೂತ್ರಗಳಿಂದಾಗಿ ಇವರ ವರದಿ "ಬೈಬಲ್ ಆಫ್ ಬ್ಯಾಕ್‌ವರ್ಡ್ ಕಮ್ಯೂನಿಟಿ" ಎಂದು ಹೆಸರಾಗಿದೆ. ಶ್ರೀ ದೇವರಾಜ ಅರಸು ಹಾಗೂ ಡಾ॥ ಅಂಬೇಡ್ಕರ್ ಪ್ರಶಸ್ತಿಗಳನ್ನು ಗಳಿಸಿದ್ದ ಶ್ರೀಯುತರು 1978ರಲ್ಲಿ ಹಾಗೂ 1982ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ಸಂಸದೀಯ ವ್ಯವಹಾರ, ಕಾನೂನು, ಸಮಾಜ ಕಲ್ಯಾಣ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಖಾತೆಯ ಸಚಿವರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 15.9.2006ರಂದು ನಿಧನ ಹೊಂದಿರುತ್ತಾರೆ.

5. ಶ್ರೀ ಎಂ.ಡಿ. ಶಿವಪುರ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ.ಡಿ.ಶಿವಪುರ ಅವರು 1924ನೇ ಮೇ 11ರಂದು ಹಾವೇರಿ ತಾಲ್ಲೂಕಿನ ಹಮ್ಮರೆಡ್ಡಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರು. ತುಂಗಭದ್ರ ರೈತ ಸಹಕಾರಿ ಸ್ಪಿನ್ನಿಂಗ್ ಮಿಲ್ಲಿನ ಉಪಾಧ್ಯಕ್ಷರಾಗಿ, ಹಾವೇರಿ ಡಿವಿಜನ್ ಹೈಬ್ರಿಡ್ ಸೀಡ್ಸ್ ಪ್ರೊಡ್ಯೂಸರ್ಸ್ ಕೋ-ಆಪರೇಟಿವ್ ಸೊಸೈಟಿ ನಿರ್ದೇಶಕರಾಗಿ, ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾಗಿ, ಕರ್ನಾಟಕ ಅಪೆಕ್ಸ್ ಬ್ಯಾಂಕಿನ ನಿರ್ದೇಶಕರಾಗಿ, ಹಾವೇರಿ ತಾಲ್ಲೂಕು ಅಭಿವೃದ್ಧಿ ಮಂಡಳಿ ಹಾಗೂ ಟಿ.ಎ.ಪಿ.ಸಿ.ಎಂ.ಎಸ್.ನ ಅಧ್ಯಕ್ಷರಾಗಿ, ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆಯ ನಿರ್ದೇಶಕರಾಗಿ, ಗ್ರಾಮಸೇವಾ ಸಹಕಾರಿ ಸಂಘ ಹಾಗೂ ಹಮ್ಮರೆಡ್ಡಿ ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾಗಿ, ರೈತರು, ದೀನ ದಲಿತರ ಏಳಿಗೆಗಾಗಿ ಅಪಾರ ಸೇವೆ ಸಲ್ಲಿಸಿದ್ದರು. ಶ್ರೀ ಶಿವಪುರ ಅವರು 1989ರಲ್ಲಿ ಹಾವೇರಿ ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾಗಿದ್ದರು.

ಶ್ರೀಯುತರು ದಿನಾಂಕ 22.7.2006ರಂದು ನಿಧನರಾದರು.

6. ಶ್ರೀ ಎಸ್.ಎಂ.ಗುರಡ್ಡಿ

ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಸಂಸತ್ತಿನ ಮಾಜಿ ಸದಸ್ಯರಾಗಿದ್ದ ಶ್ರೀ ಎಸ್.ಎಂ. ಗುರಡ್ಡಿ ಅವರು 1927ನೇ ಏಪ್ರಿಲ್ 11ರಂದು

ಸಿಂಧಗಿ ತಾಲ್ಲೂಕಿನಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ವಿದ್ಯಾರ್ಥಿ ಸಂಘಟನೆಯ ಸದಸ್ಯರಾಗಿ ಬಿಜಾಪುರದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆಯ ಸಮ್ಮೇಳನವನ್ನು ನಡೆಸಿದ್ದರು. ಜಿಲ್ಲಾ ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ, ತಾಲ್ಲೂಕು ಬೋರ್ಡಿನ ಉಪಾಧ್ಯಕ್ಷರಾಗಿ, ಸಹಕಾರ ಸಂಘದ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕಿನ ಸದಸ್ಯರಾಗಿದ್ದ ಶ್ರೀಯುತರು ರೈತರು ಶಿಕ್ಷಣ ಸೌಲಭ್ಯವನ್ನು ಪಡೆಯಲು ಹಾಗೂ ಕೃಷಿಯಲ್ಲಿ ನೂತನ ಪದ್ಧತಿಯನ್ನು ಅಳವಡಿಸಲು ದುಡಿದಿದ್ದರು. ಮುದ್ದೇಬಿಹಾಳ ಕ್ಷೇತ್ರದಿಂದ ಮೂರು ಹಾಗೂ ನಾಲ್ಕನೇ ವಿಧಾನಸಭೆಗೆ ಹಾಗೂ 1984ರಲ್ಲಿ ಬಿಜಾಪುರದಿಂದ ಲೋಕಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 23.7.2006ರಂದು ನಿಧನ ಹೊಂದಿದರು.

7. ಶ್ರೀ ಸೋಮಲಿಂಗಪ್ಪ ಹೆಚ್. ನಲವಾಗಲ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಸೋಮಲಿಂಗಪ್ಪ ಹೆಚ್.ನಲವಾಗಲ ಅವರು 1935ನೇ ಸೆಪ್ಟೆಂಬರ್ 12ರಂದು ರಾಣೆಬೆನ್ನೂರು ತಾಲ್ಲೂಕಿನಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರು, ಹಿಂದುಳಿದ ವರ್ಗದವರ ಅಭಿವೃದ್ಧಿಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ರಾಣೆಬೆನ್ನೂರು ಎಪಿಎಂಸಿಯ ಉಪಾಧ್ಯಕ್ಷರಾಗಿ, ರಾಣೆಬೆನ್ನೂರು ಹಿಂದುಳಿದವರ್ಗಗಳ ವಸತಿ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದು, 1978ರಲ್ಲಿ ಆರನೇ ವಿಧಾನಸಭೆಗೆ ರಾಣೆಬೆನ್ನೂರು ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 20.8.2006ರಂದು ನಿಧನ ಹೊಂದಿದರು.

8. ಶ್ರೀ ಗೋವಿಂದರಾವ್ ಮಾನವಿ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಗೋವಿಂದರಾವ್ ಮಾನವಿ ಅವರು 1914ನೇ ಇಸವಿಯಲ್ಲಿ ಜನಿಸಿದ್ದು, ವೃತ್ತಿಯಲ್ಲಿ ವ್ಯಾಪಾರಸ್ಥರು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆ ವಾಸ ಅನುಭವಿಸಿದ್ದ ಶ್ರೀಯುತರು ನಿಪ್ಪಾಣಿ ನಗರಸಭೆಯ ಅಧ್ಯಕ್ಷರಾಗಿ, ಹಲವಾರು ಶಿಕ್ಷಣ ಸಂಸ್ಥೆಗಳ ಪದಾಧಿಕಾರಿಯಾಗಿಯೂ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ಮೂರು ಹಾಗೂ ನಾಲ್ಕನೇ ವಿಧಾನಸಭೆಗೆ ನಿಪ್ಪಾಣಿ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 30.8.2006ರಂದು ನಿಧನ ಹೊಂದಿದರು.

9. ಶ್ರೀ ಬಿ.ಕೆ. ಪುಟ್ಟಯ್ಯ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಕೆ. ಪುಟ್ಟಯ್ಯ ಅವರು 1919ನೇ ಜುಲೈ 24ರಂದು ಜನಿಸಿದ್ದು, ವೃತ್ತಿಯಲ್ಲಿ ವ್ಯಾಪಾರಸ್ಥರು ಹಾಗೂ ಕೈಗಾರಿಕೋದ್ಯಮಿಗಳು, ಶಿಶುವಿಹಾರ ಹಾಗೂ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವ ಮೂಲಕ ಸಾಮಾಜಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿದ್ದ ಶ್ರೀಯುತರು ಹಲವಾರು ಅಭಿವೃದ್ಧಿ ಸಮಿತಿಗಳ ಅಧ್ಯಕ್ಷರಾಗಿ, ಮೈಸೂರು ಪುರಸಭೆಯ ಸದಸ್ಯರಾಗಿ, ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ಹಾಗೂ ಮೈಸೂರು ಪವರ್‌ಲೂಮ್ ಮಾಲೀಕರ ಸಂಘದ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ಮೂರನೇ ವಿಧಾನಸಭೆಗೆ ಮೈಸೂರು ನಗರ ಉತ್ತರ ಕ್ಷೇತ್ರದಿಂದ ಚುನಾಯಿತರಾಗಿದ್ದರು.

ಶ್ರೀಯುತರು ದಿನಾಂಕ 31.8.2006ರಂದು ನಿಧನ ಹೊಂದಿದರು.

10. ಶ್ರೀ ನಡಾಫ್ ಮಹಮದ್ ಕಾಸಿಂ ಸಾಬ್ ಮರ್ದಾನ್‌ಸಾಬ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ.ಎಂ. ನಡಾಫ್ ಅವರು 1927ರಲ್ಲಿ ಶಿಗ್ಗಾಂವ್ ತಾಲ್ಲೂಕಿನಲ್ಲಿ ಜನಿಸಿದ್ದು ಕಾನೂನು ಪದವೀಧರರಾಗಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ತಾಲ್ಲೂಕು ಶಿಕ್ಷಣ ಸಮಿತಿ, ಹುಬ್ಬಳ್ಳಿಯ ಅಜಾದ್ ಕೋ-ಆಪರೇಟಿವ್ ಸೊಸೈಟಿ ಹಾಗೂ ಖಾದಿ ಗ್ರಾಮೋದ್ಯೋಗ ಸಂಘದ ಅಧ್ಯಕ್ಷರಾಗಿ, ಭೂ ನ್ಯಾಯಮಂಡಳಿ, ಕರ್ನಾಟಕ ಮುಸ್ಲಿಮ್ ಎಜುಕೇಷನ್ ಸೊಸೈಟಿ, ಧಾರವಾಡ ಜಿಲ್ಲಾ ಅಭಿವೃದ್ಧಿ ಸಮಿತಿ, ಕರ್ನಾಟಕ ರಾಜ್ಯ ಹಜ್ ಸಮಿತಿ ಹಾಗೂ ಇನ್ನಿತರೆ ಹಲವಾರು ಸಮಿತಿಗಳ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದು, ಐದು, ಆರು ಹಾಗೂ ಏಳನೇ ವಿಧಾನಸಭೆಗೆ ಶಿಗ್ಗಾಂವ್ ಕ್ಷೇತ್ರದಿಂದ ಚುನಾಯಿತರಾಗಿದ್ದರು.

ಶ್ರೀಯುತರು ದಿನಾಂಕ 06.09.2006ರಂದು ನಿಧನ ಹೊಂದಿದರು.

11. ಶ್ರೀ ವೆಂಕನಗೌಡ ಹನುಮಂತಗೌಡ ಪಾಟೀಲ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ವೆಂಕನಗೌಡ ಹನುಮಂತಗೌಡ ಪಾಟೀಲ್ ಅವರು 1926ನೇ ಜೂನ್ 1ರಂದು ಬೀಳಗಿ ತಾಲ್ಲೂಕು ಗಲಗಲಿ ಗ್ರಾಮದಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಸಹಕಾರ ಚಳವಳಿಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು 1952 ರಿಂದ 1967ರ ವರೆಗೆ ಸತತ 15 ವರ್ಷಗಳ ಕಾಲ ಬಾದಾಮಿ ಕ್ಷೇತ್ರದಿಂದ ವಿಧಾನಸಭೆಗೆ

ಚುನಾಯಿತರಾಗಿದ್ದರು. 1976ರಲ್ಲಿ ವಿಧಾನ ಪರಿಷತ್ತಿಗೆ ನಡೆದ ಉಪ ಚುನಾವಣೆಯಲ್ಲಿಯೂ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 9.9.2006ರಂದು ನಿಧನ ಹೊಂದಿದರು.

12. ಶ್ರೀ ಮತಿಘಟ್ಟ ಕೃಷ್ಣಮೂರ್ತಿ

ಹಿರಿಯ ಜಾನಪದ ವಿದ್ವಾಂಸರು ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಮತಿಘಟ್ಟ ಕೃಷ್ಣಮೂರ್ತಿ ಅವರು **"ಕಳಸಾಪುರದ ಹುಡುಗರು"** ಕಾದಂಬರಿಯಿಂದ ಪ್ರಖ್ಯಾತಿ ಹೊಂದಿದ್ದರು. ಜಾನಪದ ಸಾಹಿತ್ಯದಲ್ಲಿ ಅಪಾರ ಸೇವೆ ಸಲ್ಲಿಸಿರುವ ಶ್ರೀಯುತರು "ಸರ್ವೋದಯ ಕಾದಂಬರಿ, ನಮ್ಮ ಹಳ್ಳಿಯ ಹಾಡುಗಳು, ಪಚ್ಚೆತೆನೆ, ಮರುಗಿ, ಗುಂಡನಪೂಜೆ, ಹೊಂಬಾಳೆ, ಕಲ್ಯಾಣಿ, ಹೊಸಹಳ್ಳಿ, ಭರತಪ್ಪನ ಸೊಂಟಕ್ಕೆ ಘಂಟೆ ಮತ್ತಿತರ ಹಲವಾರು ಪುಸ್ತಕಗಳನ್ನು ರಚಿಸಿದ್ದರು. ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದ ರಂಗ ಕಾರ್ಯಕ್ರಮಗಳನ್ನು ರಚಿಸಿ, ನಿರ್ದೇಶಿಸಿ, ರಾಗ ಸಂಯೋಜನೆಯನ್ನು ನಡೆಸಿದ್ದರು. ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುವ ಶ್ರೀಯುತರು ತಾಯಿನಾಡು, ಕೈಲಾಸ ಹಾಗೂ ಕನ್ನಡ ಪ್ರಭ ಪತ್ರಿಕೆಗಳಲ್ಲಿ ಪತ್ರಕರ್ತರಾಗಿಯೂ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 27.7.2006ರಂದು ನಿಧನ ಹೊಂದಿದರು.

13. ಶ್ರೀ ಎಸ್.ಕೆ. ಕರೀಂ ಖಾನ್

ಸ್ವಾತಂತ್ರ್ಯ ಹೋರಾಟಗಾರರು, ಗಾಂಧಿವಾದಿ, ಬಹುಮುಖ ವ್ಯಕ್ತಿತ್ವದ ಶ್ರೀ ಎಸ್.ಕೆ. ಕರೀಂ ಖಾನ್ ಅವರು 1908ರಲ್ಲಿ ಸಕಲೇಶಪುರದಲ್ಲಿ ಜನಿಸಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಗಾಂಧಿ ತತ್ವಕ್ಕೆ ಮಾರುಹೋಗಿ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡು ಎಂಟು ಬಾರಿ ಸೆರೆಮನೆ ವಾಸ ಅನುಭವಿಸಿದ್ದರು. ನಾಡಿನ ಹಳೆ ತಲೆಮಾರಿನ ಜಾನಪದ ಮತ್ತು ಸಾಂಸ್ಕೃತಿಕ ಪರಂಪರೆಯ ಕೊಂಡಿಯಾಗಿದ್ದ ಶ್ರೀಯುತರು ಜಾನಪದ ಕ್ಷೇತ್ರದಲ್ಲಿ ಬಹಳಷ್ಟು ಕೆಲಸ ಮಾಡಿದ್ದರು. ಪತ್ರಕರ್ತರಾಗಿ, ಹಲವಾರು ಪತ್ರಿಕೆಗಳ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದ್ದು, "ಮಾಲತಿ ಮಾಧವ" ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಲೈಲಾ ಮಜ್ನುವನ್ನು ಕನ್ನಡಕ್ಕೆ ತಂದಿದ್ದರು. "ಬಂದಾನಿ ಹುಸೇನ್" ಕಾದಂಬರಿ, "ಮಧು ಮೋಹನ, ಮಾಗಡಿ ಕೆಂಪೇಗೌಡ, ಬೆಂಗಳೂರು ಕೆಂಪೇಗೌಡ" ನಾಟಕಗಳು, "ನೀವರ, ನಿಹಾರ" ಕಥಾಸಂಗ್ರಹಗಳು, "ಕನ್ನಡ ಜನಪದ ಗೀತೆಗಳು ಮತ್ತು ಜನಪದ ಗೀತೆಗಳು" ಅವರ ಜನಪದ

ಸಂಗ್ರಹಗಳಾಗಿವೆ. ಚಿತ್ರರಂಗದಲ್ಲಿಯೂ ಕಾರ್ಯ ನಿರ್ವಹಿಸಿರುವ ಶ್ರೀಯುತರು ಚಲನಚಿತ್ರಗಳಿಗೆ ಕಥೆ, ಸಂಭಾಷಣೆ, ಹಾಗೂ ಗೀತೆಗಳನ್ನು ರಚಿಸಿದ್ದಾರೆ. ತಮ್ಮ ಸೇವೆಗಾಗಿ ಕರ್ನಾಟಕದ ಪ್ರತಿಷ್ಠಿತ "ಜಾನಪದ ಶ್ರೀ ಪ್ರಶಸ್ತಿ, ಗುಲ್ಬರ್ಗಾ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಿಂದ ನಾಡೋಜ ಪ್ರಶಸ್ತಿ, ಜೀಶಂಪ ಪ್ರಶಸ್ತಿ, ಚಿ.ಉದಯಶಂಕರ್ ಚಿತ್ರ ಸಾಹಿತ್ಯ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಹಂಸರತ್ನ ಪ್ರಶಸ್ತಿ" ಗಳನ್ನು ಗಳಿಸಿರುವ ಶ್ರೀಯುತರ ನಿಧನದಿಂದ ನಾಡಿನ ಸಾಂಸ್ಕೃತಿಕ ಲೋಕದ ಕಣ್ಮಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಶ್ರೀಯುತರು ದಿನಾಂಕ 29.7.2006ರಂದು ನಿಧನ ಹೊಂದಿದರು.

14. ಶ್ರೀಮತಿ ಮಹದೇವಿ ತಾಯಿ

ಗಾಂಧಿ ಅನುಯಾಯಿ, ವಿನೋಬಭಾವೆ ಒಡನಾಡಿ ಶತಾಯುಷಿ ಶ್ರೀಮತಿ ಮಹದೇವಿ ತಾಯಿ ಅವರು 1906ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ದೊಡ್ಮನೆಯಲ್ಲಿ ಜನಿಸಿದ್ದು, ಅವರಿಗೆ 2006ಕ್ಕೆ 100 ವರ್ಷ ತುಂಬಿತ್ತು. ವಿಶ್ವನೀಡಂ ಟ್ರಸ್ಟಿನ ಸಂಸ್ಥಾಪಕರಾಗಿದ್ದ ಅವರು ಮಹಾತ್ಮಾ ಗಾಂಧೀಜಿಯವರ ಅನುಯಾಯಿಯಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದರು. ವಿನೋಬ ಭಾವೆ ಅವರು ಕೈಗೊಂಡಿದ್ದ ಭೂದಾನ ಪಾದಯಾತ್ರೆಯಲ್ಲಿ ಇಡೀ ರಾಜ್ಯವನ್ನು ಸುತ್ತಿ ಚಳವಳಿಗೆ ಬಲ ತುಂಬಿದ್ದರು. ಮಹಿಳೆಯರ ಪರವಾದ ಹೋರಾಟ, ಅಭಿಪ್ರಾಯ ಹಾಗೂ ನಿಲುವುಗಳ ಪರವಾಗಿ ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಿದ್ದ ಮಹದೇವಿ ತಾಯಿಯವರು "ದೇವತಾ ಆತ್ಮ" ಎಂಬ ಕೃತಿಯನ್ನು ರಚಿಸಿದ್ದಾರೆ. ಸರಳ ಬದುಕು ಸಾಗಿಸಿದ್ದ ಮಹದೇವಿ ತಾಯಿ ಹೆಣ್ಣುಮಕ್ಕಳಿಗೆ ಮಾತೆಯ ಮಮತೆ ಕೊಟ್ಟು ಜಾತ್ಯಾತೀತ ನಿಲುವಿನ ಪ್ರತಿಪಾದಕಿಯಾಗಿದ್ದರು.

ಶ್ರೀಮತಿ ಮಹದೇವಿ ತಾಯಿ ಅವರು ದಿನಾಂಕ 6.8.2006ರಂದು ನಿಧನ ಹೊಂದಿದರು.

15. ಬಾಂಬ್ ಸ್ಫೋಟದಿಂದ ಮೃತಪಟ್ಟವರು

ಮುಂಬೈ ಸರಣಿ ಸ್ಫೋಟದ ನೆನಪು ಮಾಸುವ ಮುನ್ನವೇ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಮಾಲೆಗಾಂವ್‌ನಲ್ಲಿ ದಿನಾಂಕ 8.9.2006ರಂದು ಸರಣಿ ಸ್ಫೋಟಗಳಾಗಿದ್ದು, ಸುಮಾರು 38ಕ್ಕೂ ಹೆಚ್ಚು ಜನ ಮೃತರಾಗಿದ್ದಾರೆ. ಹಿರಿಯರಿಗಾಗಿ ಪ್ರಾರ್ಥನೆ ಸಲ್ಲಿಸಲು ಅಪಾರ ಸಂಖ್ಯೆಯಲ್ಲಿ ಮುಸ್ಲಿಂ ಜನಾಂಗದವರು ನೆರೆದಿದ್ದ ವಿಶೇಷ ಶುಕ್ರವಾರದಂದು ಕೋಮು ದಳ್ಳುರಿಯನ್ನು

1 ಪಿ.ಎಂ.

ಉಂಟುಮಾಡಲು ಭಯೋತ್ಪಾದಕರು ಬಾಂಬ್‌ಗಳನ್ನು ಸ್ಫೋಟಿಸಿ ಅಮಾಯಕರ ಪ್ರಾಣಹತ್ಯೆಗೈದಿರುವುದು ಅತ್ಯಂತ ಘೋರವಾದುದು. ಭಯೋತ್ಪಾದಕರ ಈ ಕೃತ್ಯಗಳಿಂದ ಎದೆಗುಂದದೆ ಕೋಮು ಸೌಹಾರ್ದತೆಯನ್ನು ಮೆರೆದಿರುವ ಮಹಾರಾಷ್ಟ್ರದ ಜನತೆ ನಿಜಕ್ಕೂ ಅಭಿನಂದನಾರ್ಹರು. ಭಯೋತ್ಪಾದಕರ ಈ ಕೃತ್ಯವನ್ನು ಈ ಸದನ ಖಂಡಿಸುತ್ತದೆ ಹಾಗೂ ಮೃತರ ನಿಧನದಿಂದ ಉಂಟಾದ ದುಃಖವನ್ನು ಭರಿಸುವ ಶಕ್ತಿಯನ್ನು ಈ ಕುಟುಂಬಗಳಿಗೆ ನೀಡಲೆಂದು ಹಾರೈಸುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಅಧ್ಯಕ್ಷರೇ, ಭಾರತ ರತ್ನ ಉಸ್ತಾದ್ ಬಿಸ್ಮಿಲ್ಲಾಖಾನ್, ಕರ್ನಾಟಕದ ಮಾಜಿ ರಾಜ್ಯಪಾಲ ಹಾಗೂ ಕೇಂದ್ರದ ಮಾಜಿ ಸಚಿವರೂ ಆಗಿದ್ದ ಭಾನು ಪ್ರತಾಪ್ ಸಿಂಗ್, ಮಾಜಿ ಸಚಿವರಾದ ಜಿ ಪುಟ್ಟಸ್ವಾಮಿಗೌಡ ಹಾಗೂ ಎಲ್.ಜಿ. ಹಾವನೂರು, ವಿಧಾನಸಭೆ ಮಾಜಿ ಸದಸ್ಯರಾದ ಎಂ ಡಿ ಶಿವಪುರ್, ಲೋಕಸಭೆ ಮತ್ತು ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಎಸ್ ಎಂ ಗುರಡ್ಡಿ, ಶಾಸಕರಾದ ಸೋಮಲಿಂಗಪ್ಪ, ಗೋವಿಂದರಾವ್ ಮಾನವಿ, ಬಿ ಕೆ ಪುಟ್ಟಯ್ಯ, ನಡಾಫ್ ಮಹಮದ್ ಕಾಸಿಮ್ ಸಾಬ್ ಮರ್ದಾನ್ಸಾಬ್, ವೆಂಕನಗೌಡ ಪಾಟೀಲ, ಹಾಗೂ ರಾಜ್ಯದ ಗಣ್ಯ ವ್ಯಕ್ತಿಗಳಾಗಿದ್ದಂತಹ ಮತಿಘಟ್ಟ ಕೃಷ್ಣಮೂರ್ತಿ, ಎಸ್.ಕೆ. ಕರೀಂಖಾನ್, ಶ್ರೀಮತಿ ಮಹದೇವಿ ತಾಯಿಯವರುಗಳ ಸಂತಾಪ ಸೂಚನೆ ಸಂದರ್ಭದಲ್ಲಿ, ವಿಶೇಷವಾಗಿ ಭಾರತರತ್ನ ಉಸ್ತಾದ್ ಬಿಸ್ಮಿಲ್ಲಾಖಾನ್‌ರವರು ಶಹನಾಯಿ ವಾದನದಿಂದ ಇಡೀ ವಿಶ್ವದ ಹೃದಯ ಗೆದ್ದಿದ್ದರು ಹಾಗೂ ರಾಷ್ಟ್ರದ ಹಲವು ಪ್ರಶಸ್ತಿಗಳನ್ನು ಅವರ ಮಡಿಲಿಗೆ ಪಡೆದುಕೊಂಡಿದ್ದ ಅಪರೂಪದ ವ್ಯಕ್ತಿಯಾಗಿ ರಾಷ್ಟ್ರದಲ್ಲಿ ಸೇವೆ ಸಲ್ಲಿಸಿದ್ದಾರೆ, ಈ ಸಂದರ್ಭದಲ್ಲಿ ನಾನು ಅವರ ಆತ್ಮಕ್ಕೆ ಸಂತಾಪವನ್ನು ಕೋರುತ್ತೇನೆ ಇನ್ನು ಈ ರಾಜ್ಯದ ರಾಜ್ಯಪಾಲರಾಗಿ, ಕೇಂದ್ರದ ಸಚಿವರಾಗಿ ವಿಶೇಷವಾಗಿ ಕೃಷಿ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿದ್ದಂತಹ ಭಾನುಪ್ರತಾಪಸಿಂಗ್‌ರವರ ಆತ್ಮಕ್ಕೆ ಶಾಂತಿ ಕೋರಲು ಬಯಸುತ್ತೇನೆ. ಅದೇ ರೀತಿ ಎಲ್.ಜಿ. ಹಾವನೂರು ರವರು ವಿಧಾನಪರಿಷತ್ತಿನ ಸದಸ್ಯರಾಗಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಈ ರಾಜ್ಯಕ್ಕೆ ಕೊಟ್ಟಿರುವ ಕೊಡುಗೆ ಸಲ್ಲಿಸಿರುವ ಸೇವೆ, ಆ ಆಯೋಗದ ಮುಖ್ಯಸ್ಥರಾಗಿ ಕೆಲಸ ಮಾಡುವ ಸಂದರ್ಭದಲ್ಲಿ ರಾಜ್ಯಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸುತ್ತೇನೆ. ಅವರ ಆತ್ಮಕ್ಕೆ ಶಾಂತಿ ಕೋರಬಯಸುತ್ತೇನೆ. ಅದೇ ರೀತಿ ಪುಟ್ಟಸ್ವಾಮಿಗೌಡರು ನನ್ನ

ತಾಲ್ಲೂಕಿನ ಹಿರಿಯ ರಾಜಕಾರಣಿ, ಅವರು ಹಲವು ಇಲಾಖೆ ಸಚಿವರಾಗಿ ಅವರು ನೀಡಿದ ಕೊಡುಗೆಯನ್ನು ಈ ಸಂದರ್ಭದಲ್ಲಿ ಸ್ಮರಿಸಿ ಅವರ ಆತ್ಮಕ್ಕೂ ಶಾಂತಿ ಕೋರಬಯಸುತ್ತೇನೆ. ಅದೇ ರೀತಿ ಶಿವಪುರ್, ಗುರಡ್ಡಿ, ಸೋಮಲಿಂಗಪ್ಪ, ಗೋವಿಂದರಾವ್ ಮಾನವಿ, ಬಿ ಕೆ ಮುಟ್ಟಯ್ಯ, ನದಾಫ್, ವೆಂಕನಗೌಡ ಪಾಟೀಲ ಇವರು ಶಾಸಕರಾಗಿ ಹಲವು ಸಹಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ಪ್ರಮುಖ ಕಾಣಿಕೆ ಈ ಸಮಾಜಕ್ಕೆ ಕೊಟ್ಟಿರುವ ಸಂದರ್ಭದಲ್ಲಿ ಅವರೆಲ್ಲರ ಆತ್ಮಕ್ಕೆ ಶಾಂತಿ ಕೋರಿ, ವಿಶೇಷವಾಗಿ ಕರೀಂ ಖಾನರು ಜಾನಪದ ಸಾಹಿತ್ಯದಲ್ಲಿ ಹಲವು ರಂಗದಲ್ಲಿ ಸೇವೆ ಸಲ್ಲಿಸಿ ಹಲವು ಪ್ರಶಸ್ತಿಗಳನ್ನು ಪಡೆದು ಸರಳ ಜೀವನ ನಡಿಸಿದ ಅವರಿಗೂ ಈ ಸಂದರ್ಭದಲ್ಲಿ ಶಾಂತಿ ಕೋರಿ, ಮತಿಘಟ್ಟ ಕೃಷ್ಣಮೂರ್ತಿಯವರು ಕಾದಂಬರಿ ಕ್ಷೇತ್ರದಲ್ಲಿ, ಲೇಖನ ಕ್ಷೇತ್ರದಲ್ಲಿ ಸಮಾಜಕ್ಕೆ ಕೊಡುಗೆ ಕೊಟ್ಟಿರುವುದನ್ನು ಸ್ಮರಿಸಿ ಅವರ ಆತ್ಮಕ್ಕೂ ಶಾಂತಿ ಕೋರಲು ಬಯಸುತ್ತೇನೆ. ಶ್ರೀಮತಿ ಮಹದೇವಿ ತಾಯಿಯವರು ಶತಾಯುಷಿಜೀವನ ನಿರ್ವಹಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ, ವಿನೋಬಾ ಭಾವೆಯವರು ತತ್ವಕ್ಕೆ ಮಾರುಹೋಗಿ ಅವರ ಮಾರ್ಗದರ್ಶನದಲ್ಲಿ ಏನು ನಿಸ್ವಾರ್ಥ ಸೇವೆ ಸಲ್ಲಿಸಿದ್ದಾರೆ ಅವರ ಆತ್ಮಕ್ಕೂ ಶಾಂತಿ ಕೋರಿ ವಿಶೇಷವಾಗಿ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಮಾಲೇಗಾವ್‌ನಲ್ಲಿ ಆದ ಬಾಂಬ್ ಸ್ಫೋಟದಲ್ಲಿ ಮೃತಪಟ್ಟವರಿಗೆ ಶಾಂತಿಯನ್ನು ಕೋರುತ್ತೇನೆ. ಈ ಹೀನ ಕೃತ್ಯವನ್ನು ಖಂಡಿಸಿ ಮಹಾರಾಷ್ಟ್ರದ ಜನತೆ ಆ ಸಂದರ್ಭದಲ್ಲಿ ಪದೇ ಪದೇ ಹಿಂಸಾ ಘಟನೆಗಳು ಜರುಗುವುದನ್ನು ಎದುರಿಸುವ ಶಕ್ತಿಯನ್ನು ಭಗವಂತನು ಆ ರಾಜ್ಯದ ಜನತೆಗೆ ನೀಡಲಿ ಎಂದು ಈ ಸಂದರ್ಭದಲ್ಲಿ ಬಯಸಿ ಇವರೆಲ್ಲರಿಗೂ ಮತ್ತೊಮ್ಮೆ ಶಾಂತಿ ಕೋರಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎನ್. ಧರಂಸಿಂಗ್ (ವಿರೋಧ ಪಕ್ಷದ ನಾಯಕರು) : ಅಧ್ಯಕ್ಷರೇ, ಸಂತಾಪ ಸೂಚನೆಗೆ ನಾನೂ ಕೂಡ ಅನುಮೋದಿಸುತ್ತೇನೆ. ತಮ್ಮ ಸಂತಾಪ ಸೂಚನೆಯಲ್ಲಿ ನಾಡಿನ ಮತ್ತು ರಾಷ್ಟ್ರದ ಪ್ರಮುಖ ವ್ಯಕ್ತಿಗಳಿಗೆ ಗಡಿಭಾಗ ಬೆಳಗಾವಿಯಲ್ಲಿ ನಡೆದಿರುವ ಅಧಿವೇಶನದಲ್ಲಿ ಸಂತಾಪ ಸೂಚನೆ ಮುಖಾಂತರ ಕಾರ್ಯಕಲಾಪ ಪ್ರಾರಂಭವಾಗುತ್ತಿದೆ. ಉಸ್ತಾದ್ ಬಿಸ್ಮಿಲ್ಲ ಖಾನ್‌ರವರು ಬಿಹಾರ ದಲ್ಲಿ ಜನಿಸಿ ಬನಾರಸ್‌ನಲ್ಲಿ ವಿಶೇಷವಾಗಿ ಜವಹರಲಾಲ್ ನೆಹರೂ ರವರ ಜೊತೆಗೂಡಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ಮಾಡಿದ್ದಾರೆ, ಅವರು ಭಾರತೀಯ ಸಂಗೀತಕ್ಕೆ ಒಳ್ಳೆಯ ಕಾಣಿಕೆ ಕೊಟ್ಟವರು, ಅವರನ್ನು ನಾವು ಕಳೆದುಕೊಂಡಿದ್ದೇವೆ. ಅದೇ ರೀತಿ ಭಾನುಪ್ರತಾಪ ಸಿಂಗರು ಈ ರಾಷ್ಟ್ರದ ಕೃಷಿ

ಸಚಿವರಾಗಿ ನಮ್ಮ ರಾಜ್ಯದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ವಿಶೇಷವಾಗಿ ಎಸ್.ಎಂ. ಗುರಡ್ಡಿ, ಮಾಜಿ ಸಂಸದರು, ಮುದ್ದೇಬಿಹಾಳ ಕ್ಷೇತ್ರದಿಂದ ಆರಿಸಿಬಂದು ವಿಧಾನಸಭೆಯಲ್ಲಿ ಕೂಡ ಕೆಲಸ ಮಾಡಿದ್ದಾರೆ. ಅವರು ನನಗೆ ಚಿರಪರಿಚಿತರು, ಬಿಜಾಪುರ ಜಿಲ್ಲೆ ಅಭಿವೃದ್ಧಿಗಾಗಿ ಸಾಕಷ್ಟು ಕೆಲಸ ಕಾರ್ಯ ಮಾಡಿದ್ದಾರೆ. ಸೋಮಲಿಂಗಪ್ಪ ಹೆಚ್ ನಲವಾಗಲರವರೂ ಕೂಡ 78ನೇ ಅಧಿವೇಶನದಲ್ಲಿದ್ದರು. ಹಾವನೂರರ ಅನುಯಾಯಿಗಳಾಗಿದ್ದರು. ಗೋವಿಂದ ರಾವ್ ಮಾನವಿ, ಪುಟ್ಟಯ್ಯ, ಶರಾಫ್ ಮಹಮದ್, ವೆಂಕನಗೌಡ ಪಾಟೀಲ, ಮತಿಘಟ್ಟ ಕೃಷ್ಣಮೂರ್ತಿ ಎಸ್.ಕೆ. ಕರೀಂಖಾನ್ ಅವರೂ ಕೂಡ ನಮ್ಮ ಸಾಹಿತ್ಯ ಜಗತ್ತಿಗೆ ಹೆಚ್ಚಿನ ಮಾರ್ಗದರ್ಶನ ಮಾಡಿದ್ದಾರೆ. ಮತ್ತು ವಿಶೇಷವಾಗಿ ಈ ಜಾನಪದ ಸಾಹಿತ್ಯದಲ್ಲಿ ಅವರ ಕಾಣಿಕೆ ಕೂಡ ಇದೆ. ಅದಕ್ಕೆ ಕರ್ನಾಟಕ ರಾಜ್ಯ ಇವರಿಗೆ ಪ್ರಶಸ್ತಿ ಪ್ರಧಾನ ಮಾಡಿದೆ. ಶ್ರೀಮತಿ ಮಹದೇವ ತಾಯಿ ಇವರು ರಾಮಕೃಷ್ಣ ಹೆಗಡೆ ಅವರ ಅಕ್ಕಂದಿರು. ವಿನೋಬಾ ಭಾವೆ ಇವರ ತತ್ವಗಳಲ್ಲಿ ಹೆಚ್ಚಿನ ನಿಷ್ಠೆಯಿಂದ ಕೆಲಸ ಮಾಡತಕ್ಕ ಬಹು ದೊಡ್ಡ ಸರ್ವೋದಯದ ಒಬ್ಬ ಕೆಲಸಗಾರರಾಗಿದ್ದರು. ಮತ್ತು ಇತ್ತೀಚಿನ ದಿನದಲ್ಲಿ ಬಾಂಬೆಯ ಸ್ಫೋಟದಲ್ಲಿ ಎಷ್ಟೋ ಜನ ಸತ್ತಿದ್ದರ ಬಗ್ಗೆ ಕೂಡ ಸಂತಾಪವನ್ನು ಹೇಳಿದ್ದೀರಿ. ಕೊನೆಯದಾಗಿ ಶ್ರೀ ಎಲ್.ಜಿ. ಹಾವನೂರ್ ಅವರ ಬಗ್ಗೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಹಿಂದುಳಿದ ವರ್ಗದ ಜನರಿಗೆ ಏನೊಂದು ಜಾತಿವಾದಿ ಸಮಾಜದ ಶೋಷಿತ ವರ್ಗಕ್ಕೆ ವಿಶೇಷವಾಗಿ ಹಿಂದುಳಿದವರಿಗೆ ನ್ಯಾಯ ಕೊಡತಕ್ಕ ರೀತಿಯಲ್ಲಿ ಪ್ರತಿಪಾದನೆ ಮಾಡತಕ್ಕ ಮೇಧಾವಿ ವ್ಯಕ್ತಿ. ದಿವಂಗತ ದೇವರಾಜ ಅರಸು ಅವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಆಗಿದ್ದಾಗ ಎಲ್ಲರನ್ನೂ ಮನ ಒಲಿಸಿ, ಎಲ್.ಜಿ. ಹಾವನೂರ್ ಅವರು ಸೂಕ್ತವಾದಂಥ ಒಬ್ಬ ವ್ಯಕ್ತಿ. ಅವರ ನೇತೃತ್ವದಲ್ಲಿ ಒಂದು ಆಯೋಗದ ರಚನೆ ಆಗಬೇಕು ಎಂದಿದ್ದರು. ನಾನೂ ಕೂಡ 1972ರಲ್ಲಿ ಅವರ ಆಯೋಗದ ಒಬ್ಬ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಅವರೂ ಕೂಡ ಚೆನ್ನಾಗಿ ಅರ್ಥ ಮಾಡಿಕೊಂಡು ನೆಲ್ಸನ್ ಮಂಡೇಲಾ ಅವರು ದಕ್ಷಿಣ ಆಫ್ರಿಕಾದಲ್ಲಿ ಏನೊಂದು ಸಂವಿಧಾನದ ಮಾರ್ಪಾಡು ಮಾಡತಕ್ಕ ಕೆಲಸ ಮಾಡಿದ್ದಾರೆ, ಅದೇ ರೀತಿ ನಮ್ಮ ರಾಜ್ಯದಿಂದ ಕೂಡ ಇವರು ಆ ದೇಶಕ್ಕೆ ಹೋಗಿ ಕೆಲಸ ಮಾಡಿರತಕ್ಕವರು. ಅಂತಹ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಶ್ರೀ ಎಲ್.ಜಿ. ಹಾವನೂರ್ ಅವರು ಯಾವ ರೀತಿಯಾಗಿ ಒಂದು ವರದಿ ಕೊಟ್ಟಿದ್ದಾರೆ, ಅದು ನಮ್ಮ ರಾಜ್ಯದಲ್ಲಿ ಒಂದು ಬೈಬಲ್ ಎಂದು ಹೇಳುತ್ತೇವೆ. ಇದೇ ಬೈಬಲ್ ಅನ್ನು ನಾವು ವಿಧಾನ ಸೌಧದಲ್ಲಿ ಕೆಳಕ್ಕೆ

ಹಾಕಿದ್ದೇವೆ., ಸುಟ್ಟು ಹಾಕಿದ್ದೇವೆ. ಇಂಥ ಘಟನೆಗಳಿಂದ ಅವರಿಗೆ ಕೂಡ ಸಾಕಷ್ಟು ಮಾನಸಿಕ ನೋವಾಗಿದೆ. ಈ ದೇಶದ ವ್ಯವಸ್ಥೆಯಲ್ಲಿ ಎಲ್ಲಿ ಜನರು ಇರುತ್ತಾರೆ, ಆ ಒಂದು ದೀನದಲಿತರಿಗೆ ಮಾರ್ಗದರ್ಶನ ಕೊಡುತ್ತಾರೆ, ಅಲ್ಲಿ ಅವರ ವರ್ಣನೆ ಆಗುವುದಿಲ್ಲ. ಸತ್ತ ಮೇಲೆ ಜನರು ಬಹಳಷ್ಟು ಅವರ ಗುಣಗಾನ ಮಾಡತಕ್ಕ ಪದ್ಧತಿ ಇದೆ. ಆದರೂ ಕೂಡ ಹಾವನೂರ್ ಅವರು ನಮ್ಮ ರಾಜ್ಯದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ; ಮಾನ್ಯ ಪ್ರಕಾಶ್ ಅವರು ಅವರ ಸಮೀಪವರ್ತಿ ಇದ್ದರು, ಅವರಿಗೆ ಗೊತ್ತಿದೆ. ಅವರ ಫಿಲಾಸಫಿ ಏನಿತ್ತು? ಅವರ Ideology ಏನು ಇದೆ, ಇವತ್ತು ಹಿಂದುಳಿದ ವರ್ಗದ ರಚನೆ ಮಾಡಿ ನಮ್ಮ ರಾಜ್ಯಕ್ಕೆ ಯಾವ ರೀತಿಯಾಗಿ ಅನುಷ್ಠಾನಕ್ಕೆ ತರತಕ್ಕ ಅವರ ಅಭಿಲಾಷೆ ಇದೆ, ಆ ಅಭಿಲಾಷೆಯನ್ನು ಪೂರ್ತಿ ಮಾಡಿದರೆ ನಿಜವಾದ ರೀತಿಯಲ್ಲಿ ಅವರಿಗೆ ಶ್ರದ್ಧಾಂಜಲಿ ಅರ್ಪಣೆ ಮಾಡಿ ರೀತಿಯಲ್ಲಿ ಆಗುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಿ ತಾವು ಕೊಟ್ಟಂಥ ಎಲ್ಲಾ ಸಂತಾಪ ಸೂಚನೆಗೆ ನಾನೂ ಕೂಡ ಅನುಮೋದನೆಯನ್ನು ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ಈ ನಾಡಿನ 14 ಜನ ಧೀಮಂತ ನಾಯಕರು ನಿಧನ ಹೊಂದಿದ್ದಾರೆ. ಇವರ ನಿಧನದಿಂದ ಕೇವಲ ನಮ್ಮ ರಾಜ್ಯಕ್ಕೆ ಮಾತ್ರವಲ್ಲ ಇಡೀ ದೇಶಕ್ಕೆ ತುಂಬಲಾರದ ಒಂದು ನಷ್ಟವಾಗಿದೆ ಎಂದು ಹೇಳುತ್ತೇನೆ. ನಾನು ನಿಮ್ಮ ಮಾತಿಗೆ ಧ್ವನಿಗೂಡಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಏನೂ ಕೇಳಿಸುತ್ತಾ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಈ ಸದನ ಕಿವುಡಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಭಾರತ ರತ್ನ ಶ್ರೀ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರು ಸಾಂಪ್ರದಾಯಿಕ ವಾದ್ಯ ಶಹನಾಯಿಗೆ ವಿಶ್ವ ಮನ್ನಣೆ ಗಳಿಸಿಕೊಟ್ಟಂತಹ ಧೀಮಂತ ನಾಯಕರು. ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ಶಹನಾಯಿಗೆ ವಿಶೇಷ ಸ್ಥಾನ ಕಲ್ಪಿಸಿದ ಕೀರ್ತಿ ಅವರ ಪಾಲಿಗೆ ಸೇರಿದೆ. ಬಿಸ್ಮಿಲ್ಲಾ ಖಾನ್ ಅವರ 1916ರ ಮಾರ್ಚ್ 21 ರಂದು ಬಿಹಾರದ ದುಗ್ಗಾಂವ್‌ನಲ್ಲಿ ಜನಿಸಿದರು. 1947ರಲ್ಲಿ ಆಗಸ್ಟ್ 15ರಂದು ಭಾರತದ ಸ್ವಾತಂತ್ರದ ಸಂಕೇತವಾಗಿ ಪಂಡಿತ್ ಜವಾಹರ್ ಲಾಲ್ ನೆಹರೂ ಅವರು ಕೆಂಪು ಕೋಟೆಯ ಮೇಲೆ ತ್ರಿವರ್ಣ ರಾಷ್ಟ್ರ ಧ್ವಜವನ್ನು ಅವರೋಹಣ ಮಾಡಿದ ಮೇಲೆ, ಬಿಸ್ಮಿಲ್ಲಾಖಾನ್ ಅವರು ಶಹನಾಯಿ ಧಾರೆಯ ನಾದವನ್ನು ಹರಿಸಿದರು ಮತ್ತು ಅವರು ಅನೇಕ ಪ್ರಶಸ್ತಿಗಳಿಗೆ ಪಾತ್ರರಾಗಿರತಕ್ಕದ್ದು ತಮಗೆಲ್ಲರಿಗೂ ಗೊತ್ತಿರತಕ್ಕ ಸಂಗತಿ.

ಶ್ರೀ ಭಾನು ಪ್ರತಾಪ್ ಸಿಂಗ್ ಅವರು 1917ರ ಆಗಸ್ಟ್ 10ರಂದು ಪುರಂದರ ಶಹರ್‌ನಲ್ಲಿ ಜನಿಸಿದ್ದರು. ಅವತ್ತಿನ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಜೈಲು ವಾಸ ಅನುಭವಿಸಿದ್ದರು. ಮತ್ತು ಕೇಂದ್ರದ ಕೃಷಿ ಸಚಿವರಾಗಿ ಪ್ರಯೋಗ ಶೀಲತೆ ಮತ್ತು ದಕ್ಷತೆಗೆ ಹೆಸರಾಗಿದ್ದವರನ್ನು ನಾವು ಕಳೆದುಕೊಂಡಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ ಅವರು ಹಾಸನದ ಜಿದ್ದಾಜಿದ್ದಿನಲ್ಲಿ ಮೇಲೆದ್ದು ರಾಜ್ಯದ ರಾಜಕೀಯದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದಂಥ ಧೀಮಂತ ವ್ಯಕ್ತಿ. ಲೋಕಸಭಾ ಸದಸ್ಯರಾಗಿ, ರಾಜ್ಯದಲ್ಲಿ ಲೋಕೋಪಯೋಗಿ ಇಂಧನ, ಆರೋಗ್ಯ, ಕುಟುಂಬ ಕಲ್ಯಾಣ, ಕೃಷಿ, ತೋಟಗಾರಿಕೆ ಸಚಿವರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿದ್ದರು. ಮೆದು ಮಾತಿನ ಆದರೆ ದೃಢ ಚಿತ್ತದ ಪುಟ್ಟಸ್ವಾಮಿ ಗೌಡರ ನಿಧನದಿಂದ ಒಂದು ವರ್ಣರಂಜಿತ ಅಧ್ಯಾಯ ಕೊನೆಗೊಂಡಂತಾತಿದೆ ಎಂದು ನಾನು ಭಾವಿಸಿದ್ದೇನೆ.

ಶ್ರೀ ಎಲ್.ಜಿ. ಹಾವನೂರ್ ಅವರು, ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣದ ಬೈಬಲ್ ಎಂದೇ ಹೆಸರಾಗಿರುವ ಹಾವನೂರ್ ವರದಿಗೆ ಈ ಸಾಮಾಜಿಕ ನ್ಯಾಯದ ಇತಿಹಾಸದಲ್ಲಿ ಖಾಯಂ ಸ್ಥಾನ ದೊರೆತಿದೆ. ನಾವು ಯಾವ ರೀತಿ ಶ್ರದ್ಧಾಂಜಲಿ ಅರ್ಪಿಸಬೇಕು ಅಂತ ನಾನು ಅಂದುಕೊಂಡಿದ್ದೇನೆ ಅಂದರೆ ಅವರು ಕೊಟ್ಟಂತಹ ವರದಿಯನ್ನು, ಚಾಚೂ ತಪ್ಪದೇ ಅನುಷ್ಠಾನ ಗೊಳಿಸುವುದರ ಮೂಲಕ ನಾವು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಬಹುದು ಎಂದು ನಾನು ಭಾವಿಸಿದ್ದೇನೆ. ನನಗೂ ಅವರಿಗೂ ಆತ್ಮೀಯ ನಿಗೂಢ ಸಂಬಂಧ ಇತ್ತು. ಅವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದಾಗ ಅವರು ಬೆಳಿಗ್ಗೆಯಿಂದ ಸಂಜೆಯವರೆಗೆ ಅನೇಕ ದಿವಸಗಳು ನಂದಿ ಬೆಟ್ಟದಲ್ಲಿ ವರದಿ ತಯಾರು ಮಾಡುವಂತಹ ಕಾಲದಲ್ಲಿ ಅವರು ತೋರುಸುತ್ತಿದ್ದ ಆಸಕ್ತಿ, ಅವರು ಹಾಕುತ್ತಿದ್ದ ಶ್ರಮ ಬಹಳ ಇತ್ತು. ಅವರು 2-3 ವರ್ಷಗಳ ಕಾಲ ಬಿ.ಜೆ.ಪಿ ಯಲ್ಲಿದ್ದರು. ಹಿಂದುಳಿದ ವರ್ಗದವರು ಈ ಪಕ್ಷಕ್ಕೆ ಆಕರ್ಷಣೆ ಮಾಡುವುದಕ್ಕೆ ಮತ್ತು ಹಿಂದುಳಿದ ವರ್ಗದವರ ಬಗ್ಗೆ ಯಾವ ರೀತಿ ಕಳಕಳಿಯಿಂದ ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ನಮಗೆ ಮಾರ್ಗದರ್ಶನ ಮಾಡಿದ್ದನ್ನು ನಾನು ಮರೆಯುವುದಕ್ಕೆ ಸಾಧ್ಯವಿಲ್ಲ.

ಅದೇ ರೀತಿ ಶ್ರೀ ಎಸ್.ಎಮ್. ಗುರಡ್ಡಿ ಅವರು ಮಾಜಿ ವಿಧಾನಸಭೆ ಸದಸ್ಯರಾಗಿ, ಮಾಜಿ ಸಂಸತ್ತಿನ ಸದಸ್ಯರಾಗಿ ಅನೇಕ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಅವರ ನಿಧನದಿಂದ ಕೃಷಿ ಹಾಗೂ ಗ್ರಾಮೀಣ ಕಲ್ಯಾಣದ ಬಗ್ಗೆ

ಆಳವಾದ ಕಾಳಜಿಯನ್ನು ಹೊಂದಿದ್ದಂಥ ನಾಯಕವನ್ನು ನಾವು ಕಳೆದು ಕೊಂಡಿದ್ದೇವೆ.

ಅದೇ ರೀತಿ ಶ್ರೀ ಸೋಮಲಿಂಗಪ್ಪ ಹೆಚ್. ನಲವಾಗಲ, ಶ್ರೀಗೋವಿಂದ ರಾವ್ ಮಾನವಿ, ಶ್ರೀ ಬಿ.ಕೆ. ಪುಟ್ಟಯ್ಯ, ಶ್ರೀ ನಡಾಫ್ ಮಹಮದ್ ಕಾಸಿಂ ಸಾಬ್ ಮರ್ದಾನ್ ಸಾಬ್, ಶ್ರೀ ವೆಂಕನಗೌಡ ಹನುಮಂತಗೌಡ ಪಾಟೀಲ್, ಶ್ರೀ ಮತಿಘಟ್ಟ ಕೃಷ್ಣಮೂರ್ತಿ, ಶ್ರೀ ಎಸ್.ಕೆ. ಕರೀಂಖಾನ್, ಇವರುಗಳೂ ನಮ್ಮನ್ನು ಅಗಲಿದ್ದಾರೆ. ವಿಶೇಷವಾಗಿ ಶ್ರೀ ಕರೀಂ ಖಾನ್ ಅವರು ಸ್ವಾತಂತ್ರ ಹೋರಾಟಗಾರರಾಗಿ, ಮತ್ತು ಅಪ್ರತಿಮ ದೇಶ ಭಕ್ತರಾಗಿ ಬಹು ಮುಖ ವ್ಯಕ್ತಿ ಆಗಿದ್ದರು.

ಶ್ರೀಮತಿ ಮಹದೇವಿ ತಾಯಿ ಅವರು ಅಪ್ಪಟ ಗಾಂಧಿ ವಾದಿ ಗಾಂಧಿ ಮತ್ತು ವಿನೋಬಾ ಬಾವೆ ಅವರ ಅನುಯಾಯಿ ಆಗಿದ್ದರು. ಶತಾಯುಷಿ ಮಹದೇವಿ ನಮ್ಮನ್ನು ಅಗಲಿದ್ದಾರೆ. ಸ್ವಾತಂತ್ರ ಹೋರಾಟದಲ್ಲಿ ಉತ್ತರ ಕರ್ನಾಟಕದ ಸಿದ್ದಾಪುರ ತಾಲ್ಲೂಕಿನ ದೊಡ್ಡಮನೆ ಕುಟುಂಬ ಬಹು ದೊಡ್ಡದಾದ ಕೊಡುಗೆ ಇದೆ. ದಿವಂಗತ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಸಹೋದರಿ ಮಹದೇವಿ ಅವರು ಸ್ವಾತಂತ್ರ ಹೋರಾಟದ ಭೂದಾನ ಚಳುವಳಿ,. ಮತ್ತು ಸಮಾಜದ ಸೇವೆಗಾಗಿ ಬಹು ದೀರ್ಘವಾದ ಬದುಕನ್ನು ಮುಡಿಪಾಗಿಟ್ಟಿದ್ದರು. ಅವರನ್ನು ನಾವು ಕಳೆದುಕೊಂಡಿದ್ದೇವೆ. ಸರಳತೆ, ಜಾತ್ಯಾತೀತತೆ, ಮತ್ತು ಅರ್ಪಣಾ ಮನೋಭಾವದ ಸಂಕೇತವಾದ ಮಹದೇವಿ ಅವರುಗಳನ್ನು ನಾವು ಕಳೆದುಕೊಂಡಿದ್ದೇವೆ. ಇತ್ತೀಚೆಗೆ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಮಾಲೆಗಾಂವ್‌ನಲ್ಲಿ 38ಕ್ಕೂ ಹೆಚ್ಚು ಜನರು ಮೃತರಾಗಿದ್ದಾರೆ. ಈ ದುರಂತ ನಡೆಯಬಾರದಿತ್ತು. ಇವರ ಆತ್ಮಗಳಿಗೆ ಮುಕ್ತಿ ದೊರೆಯಲಿ ಎಂದು ತಾವು ಸೂಚಿಸಿದ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಧ್ವನಿ ಸೇರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್): ಸನ್ಮಾನ್ಯ ಅಧ್ಯಕ್ಷರೆ, ತಾವು ಪ್ರಸ್ತಾಪ ಮಾಡಿದಂಥ ಈ ಒಂದು ಪ್ರಸ್ತಾವನೆಗೆ ನನ್ನ ಸಂಪೂರ್ಣವಾದಂಥ ಬೆಂಬಲವನ್ನು ಸೂಚಿಸುತ್ತಾ ವಿಶೇಷವಾಗಿ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರು ಈ ದೇಶದ ಅತೀ ಉನ್ನತ ಶಹನಾಯಿ ವಾದ್ಯವನ್ನು ತಾನೇ ಶಹನಾಯಿ ತಯಾರು ಮಾಡಿ, ಅದರ ಮೂಲಕ ಇಡೀ ದೇಶದಲ್ಲಿ ಭಾರತದ ಶಾಸ್ತ್ರೀಯ ಸಂಗೀತಕ್ಕೆ ಒಂದು ಹೊಸ ರೂಪವನ್ನು ಕೊಟ್ಟಂತಹ ವ್ಯಕ್ತಿ. ಅಂತಹ ವ್ಯಕ್ತಿಗೆ ಭಾರತ ಸರ್ಕಾರ ಗೌರವಿಸಿ ಭಾರತ ರತ್ನ ಎನ್ನತಕ್ಕ ಅತೀ

ಉನ್ನತ ಪದವಿಯನ್ನೂ ಕೂಡ ಅವರಿಗೆ ಇವತ್ತು ಕೊಟ್ಟಿದೆ. ಬಹುಶಃ ಇಂತಹ ಸರಳ ಜೀವಿ, ಪ್ರಾಮಾಣಿಕ, ದಕ್ಷ ಸ್ವಾತಂತ್ರ ಹೋರಾಟಗಾರ; ಅನೇಕ ಶಾಖೆಗಳಲ್ಲಿ ಇಂತಹ ಜನ ಇದ್ದರೂ ಕೂಡ, ಇವರ ವ್ಯಕ್ತಿತ್ವವೇ ಬೇರೆ ಎನ್ನತಕ್ಕದ್ದನ್ನು ಇಡೀ ದೇಶದಲ್ಲಿ ಇವರು ಪ್ರತಿಬಿಂಬಿಸಿದ್ದಾರೆ. 'ಸನಾದಿ ಅಪ್ಪಣ್ಣ' ಎನ್ನುವ ಚಿತ್ರದ ಮೂಲಕ ಕರ್ನಾಟಕದ ಬಹಳಷ್ಟು ಜನರಿಗೆ ಅವರು ವಿಶೇಷವಾಗಿ ಪರಿಚಿತರಾಗಿದ್ದಾರೆ. ಇಂತಹ ಒಬ್ಬ ವ್ಯಕ್ತಿಯನ್ನು ನಾವು ಇವೊತ್ತು ಕಳೆದುಕೊಂಡಿದ್ದೇವೆ.

ಅದರ ಜೊತೆಯಲ್ಲಿ ಭಾನು ಪ್ರತಾಪ್ ಸಿಂಗ್‌ರವರು ನಮ್ಮ ರಾಜ್ಯದ ಗವರ್ನರ್ ಆಗಿ, ಕೇಂದ್ರ ಸಚಿವರಾಗಿ ಮತ್ತು ವಿಶೇಷವಾಗಿ, ಅಂದರೆ, ನಾವೆಲ್ಲರೂ ಮಂತ್ರಿಗಳಾಗಿದ್ದಾಗ ಅವರು ಗವರ್ನರ್ ಆಗಿ ಕೆಲಸವನ್ನು ಮಾಡಿದ್ದನ್ನು ನಾವು ನೋಡಿದ್ದೇವೆ. ಒಬ್ಬ ದಕ್ಷ ಮತ್ತು ವಿಶೇಷವಾಗಿ ಕೃಷಿ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಿದಂಥ ವ್ಯಕ್ತಿ. ಅಂತಹ ಒಬ್ಬ ವ್ಯಕ್ತಿ ಇವೊತ್ತು ನಮ್ಮನ್ನು ಅಗಲಿ ಹೋಗಿದ್ದಾರೆ.

ಶ್ರೀ ಎಂ.ಡಿ. ಶಿವಪುರ್‌ರವರು, ತಮಗೆ ಗೊತ್ತಿರುವಂತೆ ಇವರೂ ಕೂಡ ಹಾವೇರಿಯಲ್ಲಿನ ಸ್ವಾತಂತ್ರ್ಯ ಹೋರಾಟಗಾರರ ಒಂದು ಕುಟುಂಬದಿಂದ ಬಂದಂಥವರಾಗಿದ್ದಾರೆ. ಸದರಿಯವರ ಸೇವೆಯನ್ನು ನಾವು ಎಂದಿಗೂ ಮರೆಯುವುದಕ್ಕಾಗುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ.

ಶ್ರೀಮಾನ್ ಎಸ್.ಎಂ. ಗುರಡ್ಡಿಯವರು ಬಿಜಾಪುರ ಜಿಲ್ಲೆಯವರು. ನಮ್ಮೆಲ್ಲರಿಗೂ ಪರಿಚಿತರಿರುವ ವ್ಯಕ್ತಿ ಮತ್ತು ವಿಶೇಷವಾಗಿ ತಮ್ಮದೇ ಆದ ರಾಜಕೀಯ ಛಾಪನ್ನು ಬಿಜಾಪುರ ಜಿಲ್ಲೆಯಲ್ಲಿ ಅವರು ಇಟ್ಟುಕೊಂಡು ಬಂದಿದ್ದಾರೆ. ಅಂತಹ ಒಬ್ಬ ಧೀಮಂತ ನಾಯಕನನ್ನು ಆ ಭಾಗದ ಜನರು ಇವೊತ್ತು ಕಳೆದುಕೊಂಡಿದ್ದಾರೆ. ವಿಶೇಷವಾಗಿ ವೈಯಕ್ತಿಕವಾಗಿ ನಮಗೆಲ್ಲರಿಗೂ ಅವರು ಪರಿಚಿತರಾಗಿದ್ದರು. ಅಂತಹ ಒಬ್ಬ ಪರಿಚಿತ ವ್ಯಕ್ತಿ ಮತ್ತು ಮುಖಂಡರು ನಮ್ಮನ್ನು ಅಗಲಿ ಹೋಗಿದ್ದಾರೆ.

ಶ್ರೀ ಸೋಮಲಿಂಗಪ್ಪ ಹೆಚ್. ನಲವಾಗಲ, ಇವರೂ ಕೂಡ ನಮ್ಮ ಜಿಲ್ಲೆಯಲ್ಲಿ ಶಾಸಕರಾಗಿ ಕೆಲಸ ಮಾಡಿದ್ದಾರೆ ಮತ್ತು ವಿಶೇಷವಾಗಿ ರಾಣೆಬೆನ್ನೂರು ತಾಲ್ಲೂಕಿನಿಂದ ಅವರು ತಮ್ಮ ಸೇವೆ ಸಲ್ಲಿಸಿ ಸಹಕಾರಿ ಕ್ಷೇತ್ರದಲ್ಲಿ ಅತ್ಯುತ್ತಮವಾದ ಕೆಲಸ ಮಾಡಿದ್ದಾರೆ.

ಬಾರ್ಡರ್ ಏರಿಯಾದಲ್ಲಿರುವ ಶ್ರೀ ಗೋವಿಂದರಾವ್ ಮಾನವಿಯವರು ನಿಪ್ಪಾಣಿಯ ಜನತೆಗೆ ತಮ್ಮದೇ ಆದ ಕೊಡುಗೆ ಕೊಟ್ಟಂಥವರಾಗಿದ್ದಾರೆ. ಇವರನ್ನೂ ಕೂಡ ನಾವು ಇವೊತ್ತು ನೆನೆಸಿಕೊಳ್ಳಬೇಕಾಗಿದೆ.

ಶ್ರೀ ಬಿ.ಕೆ. ಪುಟ್ಟಯ್ಯನವರೂ ಕೂಡ ಸಾಮಾಜಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿ, ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರಿಗೂ ಕೂಡ ನನ್ನ ಹೃತ್ಪೂರ್ವಕವಾದ ಶ್ರದ್ಧಾಂಜಲಿ ಅರ್ಪಿಸುತ್ತೇನೆ.

ಶ್ರೀ ನಡಾಫ್ ಮಹಮದ್ ಕಾಸಿಂಸಾಬ್ ಮರ್ದಾನ್‌ಸಾಬ್ ತಮಗೆಲ್ಲರಿಗೂ ಗೊತ್ತಿದೆ. ಇವರು ವಿಶೇಷವಾಗಿ ತಮ್ಮದೇ ಆದ ಧಾಟಿಯಲ್ಲಿ ಖಾದಿಯನ್ನು ಹೆಚ್ಚು ಪ್ರಚಾರಕ್ಕೆ ತರುವ ಕೆಲಸ ಕೂಡ ಮಾಡಿದ್ದಾರೆ ಮತ್ತು ರಾಜ್ಯದ ಅನೇಕ ಉನ್ನತ ಮಟ್ಟದ ಸಮಿತಿಗಳಲ್ಲೂ ಕೆಲಸ ಮಾಡುವ ಮೂಲಕ ಅವರು ಕಾರ್ಯ ನಿರ್ವಹಿಸಿದ್ದಾರೆ.

ಶ್ರೀ ವೆಂಕನಗೌಡ ಹನುಮಂತಗೌಡ ಪಾಟೀಲರವರು, ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರು ಅದೇ ರೀತಿ ಶ್ರೀ ಎಸ್.ಕೆ. ಕರೀಂಖಾನ್‌ರವರು, ಇವರೆಲ್ಲರೂ ಕೂಡ ಸಮಾಜಕ್ಕೆ ತಮ್ಮ ತಮ್ಮ ಕೈಲಾದಷ್ಟು ಸೇವೆ ಸಲ್ಲಿಸಿ ವಿಶೇಷವಾಗಿ ಕನ್ನಡ ಸಾಹಿತ್ಯದಲ್ಲಿ ಕರೀಂಖಾನ್ ಸಾಹೇಬರು ಹೆಚ್ಚಿನ ಸೇವೆ ಸಲ್ಲಿಸಿರುವುದಲ್ಲದೆ, 'ಕನ್ನಡವೇ ನನ್ನ ಜೀವ' ಎನ್ನುವ ಮೂಲಕ ಕನ್ನಡ, ಕನ್ನಡ ಭಾಷೆ, ಕನ್ನಡ ಸಾಹಿತ್ಯ ಮತ್ತು ಕನ್ನಡ ಜನಪದದ ವಿಶೇಷ ಸಾಹಿತ್ಯದ ಬಗ್ಗೆ ರುಚಿ ಇಟ್ಟುಕೊಂಡಂಥ ಒಬ್ಬ ಕರೀಂಖಾನ್ ಇವೊತ್ತು ನಮ್ಮೆಲ್ಲರಿಂದ ದೂರಾಗಿದ್ದಾರೆ.

ಅದೇ ರೀತಿ ಶ್ರೀಮಾನ್ ಮಹದೇವಿ ತಾಯಿಯವರ ವಿಶೇಷವಾದ ಕೊಡುಗೆಯನ್ನು ನಾವು ನೆನೆಸಿಕೊಳ್ಳಲೇಬೇಕಾಗಿದೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ಜನಿಸಿರುವ ಇವರ ಬಗ್ಗೆ ಈಗಾಗಲೇ ವಿರೋಧ ಪಕ್ಷದ ನಾಯಕರು ಹೇಳಿದಂತೆ ಅವರು ಸರ್ವೋದಯ ಕ್ಷೇತ್ರದಲ್ಲಿ ವಿನೋಬಾ ಭಾವೆಯವರ ಜೊತೆ ಕೆಲಸ ಮಾಡತಕ್ಕಂಥ ಒಂದು ಪ್ರಯತ್ನ ಮಾಡಿ 'ಭೂದಾನ ಚಳವಳಿ'ಯಲ್ಲಿ ತಮ್ಮ ಆಸಕ್ತಿ ತೋರಿಸಿದಂತಹ ಇವರು ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸೋದರಿಯಾಗಿದ್ದರು. ಅವರು ಈ ಉತ್ತಮವಾದ ಮಾನವೀಯ ಚಳವಳಿಯಲ್ಲಿ ಕೆಲಸ ಮಾಡಿ ತಮ್ಮದೇ ಛಾಪನ್ನು ಈ ಸಮಾಜದಲ್ಲಿ ಬಿಟ್ಟುಹೋಗಿದ್ದಾರೆ. ಇವರನ್ನು ನಾವು ಎಂದಿಗೂ ಕೂಡ ಮರೆಯತಕ್ಕದ್ದಲ್ಲ.

ಇನ್ನು ಬಾಂಬ್ ಸ್ಫೋಟ ಕುರಿತು ತಮ್ಮೆಲ್ಲರಿಗೂ ಗೊತ್ತಿರುವಂತೆ ಇತ್ತೀಚೆಗೆ ನಮ್ಮ ದೇಶದಲ್ಲಿ ಇಂತಹ ಟೆರರಿಸ್ಟ್ ಆ್ಯಕ್ಟಿವಿಟೀಸ್ ಬಹಳಷ್ಟು

ಕಡೆಗಳಲ್ಲಿ ನಡೆದಿದೆ. ಅದು ಮಾಲೆಗಾಂವ್ ಇರಬಹುದು, ಮುಂಬೈ ಇರಬಹುದು, ಬೇರೆ ಬೇರೆ ರಾಜಧಾನಿಗಳಲ್ಲೂ ಕೂಡ ಈ ಕೆಲಸ ನಡೆದಿದೆ. ಇದಕ್ಕೆ ಕಡಿವಾಣ ಹಾಕುವುದಕ್ಕೆ ನಾವೆಲ್ಲರೂ ಕೂಡ ಪ್ರಯತ್ನ ಮಾಡಬೇಕಾದುದು ನಮ್ಮೆಲ್ಲರ ಕರ್ತವ್ಯವಿದೆ. ಇದರಲ್ಲಿ ನಾವೆಲ್ಲರೂ ಕೂಡ ಒಂದಾಗಿ ಇಂತಹ ಸಮಸ್ಯೆಗಳನ್ನು ಎದುರಿಸಬೇಕಾದಂತಹ ಪ್ರಯತ್ನವನ್ನು ನಾವು ಮಾಡಬೇಕಾದ ಅವಶ್ಯಕತೆ ಇದೆ.

ಒಂದು ಮಾತನ್ನು ನಾವೆಲ್ಲರೂ ಕೂಡ ಶ್ರೀ ಎಲ್.ಜಿ. ಹಾವನೂರ್ ರವರ ಬಗ್ಗೆ ನೆನಪಿಸಿಕೊಳ್ಳಬೇಕಾಗಿದೆ. ಏಕೆಂದರೆ, ಹಾವನೂರ್ ಅವರು ತಮ್ಮದೇ ಆದ ಒಂದು ವಿಶಿಷ್ಟ ಶೈಲಿಯಲ್ಲಿ ಸಮಾಜವನ್ನು ವಿಶ್ಲೇಷಣೆ ಮಾಡಿ ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವ ದೃಷ್ಟಿಯಲ್ಲಿ ದೇವರಾಜ ಅರಸುರವರ ಕಾಲದಲ್ಲಿ ಒಂದು ರಿಪೋರ್ಟ್ ತಯಾರಿಸಿ, ಅದು ಇವೊತ್ತಿನವರೆಗೂ 'ಹಾವನೂರ್ ವರದಿ' ಎಂದೇ ಬಹಳ ಪ್ರಸಿದ್ಧಿಯಾಗಿದೆ. ಆ ವರದಿಯ ಆಧಾರದ ಮೇಲೆ ಹಿಂದುಳಿದ ಜನಾಂಗವನ್ನು ವರ್ಗೀಕರಣ ಮಾಡುವ ಮೂಲಕ ಇವೊತ್ತಿನ ದಿವಸ ಆ ಜನಾಂಗಕ್ಕೆ ಏನಾದರೂ ಕೆಲವು ಸವಲತ್ತುಗಳು ಸಿಗುತ್ತಿದ್ದರೆ, ಅದು ಹಾವನೂರ್ ಕಮೀಷನ್ ರಿಪೋರ್ಟ್‌ನಿಂದ ಮಾತ್ರ. ಆ ವರದಿಯನ್ನು ಶ್ರೀ ದೇವರಾಜ ಅರಸುರವರು ಜಾರಿ ಕೊಟ್ಟಿದ್ದಾರೆನ್ನುವ ಮಾತನ್ನು ನಾವು ಎಂದಿಗೂ ಮರೆಯತಕ್ಕದ್ದಲ್ಲ. ಇತ್ತೀಚೆಗೆ ಭಾರತ ದೇಶದಲ್ಲಿ ಯಾರಾದರೂ ಕೂಡ ಹಿಂದುಳಿದ ಸಮಾಜದ ಅಭಿವೃದ್ಧಿಗೆ ಸಂಬಂಧಿಸಿದಂತೆ ಒಂದು ವರದಿ ಕೊಟ್ಟು ಅದನ್ನು ಆಚರಣೆಯಲ್ಲಿ ತಂದಂಥ ಅಥವಾ ಅದನ್ನು ಜಾರಿಯಲ್ಲಿ ತಂದಂಥವರು ಇರಲಿಲ್ಲ. ಆದರೆ, ಹಾವನೂರ್ ವರದಿಗೆ ದೇವರಾಜ ಅರಸುರವರು ಹೆಚ್ಚಿನ ಒತ್ತು ಕೊಟ್ಟು ಅದನ್ನು ಜಾರಿಯಲ್ಲಿ ತಂದು ತುಳಿತಕ್ಕೊಳಪಟ್ಟ ಜನರನ್ನು ಮೇಲೆತ್ತುವ ಪ್ರಯತ್ನ ಅವರ ವರದಿಯಿಂದಾಯಿತು. ಆ ರಿಪೋರ್ಟ್ ತಯಾರಿಸಲು ಹಗಲು-ರಾತ್ರಿ ಸಾಕಷ್ಟು ಶ್ರಮಪಟ್ಟು ತಯಾರಿಸಿದ ಬಳಿಕ ಅದು 'ಹಿಂದುಳಿದ ಜನಾಂಗದ ಬೈಬಲ್' ಎಂದೇ ಪ್ರಸಿದ್ಧಿಗೆ ಬಂದ ವರದಿಯಾಗಿದೆ. ಹಾವನೂರ್ ನೇತೃತ್ವದ ಆಯೋಗದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಧರ್ಮಸಿಂಗ್‌ರವರು ಇದ್ದರು, ಹುಬ್ಬಳ್ಳಿಯ ಹಬೀಬ್ ಸಾಬ್‌ರವರೂ ಇದ್ದರು. ಹೀಗೆ ಅನೇಕ ಮುಖಂಡರು ಆ ಕಮೀಷನ್‌ನಲ್ಲಿ ಕೆಲಸ ಮಾಡಿದ್ದಾರೆ. ನಾವೂ ಅನೇಕ ಸಲ ಅವರ ಜೊತೆ ಚರ್ಚೆ ಮಾಡಿ, ನಾವು ಸದಸ್ಯರಲ್ಲದಿದ್ದರೂ, ನಮ್ಮಂತಹವರನ್ನು ಕರೆಸಿ ಕೇಳಿತಕ್ಕಂಥ ಪ್ರಯತ್ನವನ್ನು ಅವರು ಮಾಡುತ್ತಿದ್ದರು ಎನ್ನುವುದನ್ನು ನಾವೆಂದಿಗೂ ಮರೆಯುವುದಿಲ್ಲ.

1.30 ಪಿಎಂ

ಅದೇ ರೀತಿ ಈ ಒಂದು ಎತ್ತರವಾದ ಸ್ಥಾನಕ್ಕೆ ಹೋಗಿ ಮುಟ್ಟಬೇಕಾದರೆ, ನಾನು ಹೆಮ್ಮೆಯಿಂದ ಹೇಳುತ್ತೇನೆ. ಕಾಂಗ್ರೆಸ್ ಪಕ್ಷದ ನಾಯಕತ್ವ ಅವರಿಗೆ ಕೊಟ್ಟಂಥ ಪುರಸ್ಕಾರ ಎನ್ನತಕ್ಕಂಥ ಮಾತನ್ನು ನಾವ್ಯಾರೂ ಮರೆಯತಕ್ಕಂಥಾದ್ದಲ್ಲ. ದೇವರಾಜು ಅರಸು, ಡಿ.ಕೆ.ನಾಯ್ಕರ್, ಇವರೆಲ್ಲರೂ ಅವರಿಗೆ ಪ್ರೋತ್ಸಾಹ ಕೊಟ್ಟು, ವರದಿ ತಯಾರಿಸುವುದಕ್ಕೆ ಎಲ್ಲಾ ಸಾಮಗ್ರಿಗಳನ್ನು ಕೊಟ್ಟಿದ್ದಕ್ಕಾಗಿ ಇಂತಹ ವರದಿ ಬಂದು ಸಾಮಾನ್ಯ ಜನರಿಗೆ ಇವೊತ್ತು ಸಹಾಯವಾಗತಕ್ಕಂಥ ರೀತಿಯಲ್ಲಿ ಬಂದಿದೆ. ಆದರೆ, ಇತ್ತೀಚೆಗೆ ನಾವು ನೋಡುತ್ತಿದ್ದೇವೆ. ಆ ವರದಿಯನ್ನು ಡಿವೈಡ್ ಮಾಡುವ ಪ್ರಯತ್ನ ನಡೆದಿದೆ. ಅದಕ್ಕಾಗಿ ನಾನು ಅದರ ಹೆಚ್ಚಿನ ಗೋಜಿಗೆ ಹೋಗುವುದಿಲ್ಲ. ಆದರೆ, ಒಂದು ಮಾತು ನಾವು ಎಂದಿಗೂ ಮರೆಯಬಾರದು. ಆ ಒಂದು ವರದಿಯ ಆಧಾರದ ಮೇಲೆ ಸಾಮಾನ್ಯ ಜನರಿಗೆ ಲಾಭ ಸಿಕ್ಕಿದೆ, ಆ ಲಾಭವನ್ನು ಮುಂದುವರೆಸಬೇಕು ಮತ್ತು ಅದನ್ನು ಒಗ್ಗಟ್ಟಾಗಿ ನಾವು ನೋಡಬೇಕೆನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ.

ಶ್ರೀ ಜಿ.ಪುಟ್ಟಸ್ವಾಮಿಗೌಡರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದರಲ್ಲದೆ, ಹೊಳೆನರಸೀಪುರದಿಂದ ವಿಧಾನ ಸಭಾ ಸದಸ್ಯರಾಗಿದ್ದರು ಮತ್ತು ಪಾರ್ಲಿಮೆಂಟ್ ಸದಸ್ಯರಾಗಿ ಕೂಡ ಅವರು ಕೆಲಸ ಮಾಡಿದ್ದಾರೆ. ಹಾಗೂ ಅನೇಕ ಇಲಾಖೆಗಳಲ್ಲಿ ಆಸಕ್ತಿ ವಹಿಸಿ ಕೆಲಸ ಮಾಡಿದಂತಹ ಒಬ್ಬ ಧೀಮಂತ ನಾಯಕನನ್ನು ನಾವು ಇವೊತ್ತು ಕಳೆದುಕೊಂಡಿದ್ದೇವೆ.

ಇವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಅವರ ಕುಟುಂಬಕ್ಕೆ ಭರಿಸಲಾರದಷ್ಟು ಏನು ನಷ್ಟವಾಗಿದೆಯೋ, ಏನು ತೊಂದರೆಯಾಗಿದೆಯೋ ಅದನ್ನು ಸಹಿಸತಕ್ಕಂಥ ಶಕ್ತಿಯನ್ನೂ ಕೂಡ ಭಗವಂತನು ಅವರಿಗೆ ಕೊಡಲಿ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ನನ್ನ ಹೃತ್ಪೂರ್ವಕ ಶ್ರದ್ಧಾಂಜಲಿಯನ್ನು ಇವರೆಲ್ಲರಿಗೆ ಅರ್ಪಿಸುತ್ತೇನೆ. ತಾವು ಪ್ರಸ್ತಾಪ ಮಾಡಿರುವಂತಹ ಸಂತಾಪ ಸೂಚನಾ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚನಾ ನಿರ್ಣಯವನ್ನು ನಾನೂ ಕೂಡ ಅನುಮೋದನೆ ಮಾಡುತ್ತೇನೆ. ತಾವೇನು ಇವತ್ತು ಬಹಳ ಜನಕ್ಕೆ ಸಂತಾಪ ಸೂಚನಾ ನಿರ್ಣಯವನ್ನು ತಂದಿದ್ದೀರಿ, ಅವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲೆಂದು ಆಶಿಸುತ್ತೇನೆ.

ಮಾನ್ಯ ಬಿಸ್ಮಿಲ್ಲಾ ಖಾನ್‌ರವರ ಬಗ್ಗೆ ಹೆಚ್ಚಿಗೆ ಹೇಳಬೇಕಾದ ಅಗತ್ಯ ಇಲ್ಲ. ಅವರು ಭಾರತ ರತ್ನ ಪಡೆದವರಾಗಿದ್ದರು. ಕರ್ನಾಟಕದಲ್ಲೂ ಕೂಡ ತಮ್ಮ ಶಹನಾಯಿ ಸುಧೆಯನ್ನು ಹರಿಸಿದವರಾಗಿದ್ದರು. ಅಂತಹವರು ನಿಧನರಾಗಿದ್ದರಿಂದ ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊರತೆ ಉಂಟಾಗಿದೆ ಎಂದು ನಾನು ಭಾವಿಸುತ್ತೇನೆ. ದಿವಂಗತ ಭಾನು ಪ್ರತಾಪ್ ಸಿಂಗ್‌ರವರ ಬಗ್ಗೆ ನಾನು ಎರಡು ಮಾತುಗಳನ್ನು ಹೇಳಬೇಕಾಗುತ್ತದೆ. ಅವರು ಕೇಂದ್ರದಲ್ಲಿ ಸಚಿವರಾಗಿದ್ದಾಗ, Reserve Bank of India ಹಿಡಿತದಲ್ಲಿ ಇದ್ದಂತಹ agriculture rural sector ಅನ್ನು, ಆ lending network ಅನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಬೇಕು, ಆ ನಿಯಮಗಳು ಸಡಿಲವಾಗಬೇಕು ಎಂದು ಮೊದಲನೇ ಬಾರಿಗೆ ಯೋಚನೆ ಮಾಡಿದಂತಹ ಬಹಳ ಹಿರಿಯ ವ್ಯಕ್ತಿ ಅವರಾಗಿದ್ದರು ಎಂಬುದು ನನ್ನ ನೆನಪಿನಲ್ಲಿದೆ.. NABARD constitute ಆಗಬೇಕು ಎಂಬ ಕಲ್ಪನೆ ಆರಂಭವಾದುದೇ ಮಾನ್ಯ ಭಾನುಪ್ರತಾಪ್ ಸಿಂಗ್ ಅವರ ಕಡೆಯಿಂದ ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಏನು ಅನೇಕ ಕಾಮಗಾರಿಗಳನ್ನು, ಕೃಷಿ ಸಾಲವನ್ನು refinance ಮಾಡಲಿಕ್ಕೆ Reserve Bank of India ಗೆ parallel ಆಗಿ ಏನೊಂದು ಸಂಸ್ಥೆ ಬಂತೋ, ಅದು ನಿಜವಾಗಿಯೂ ಅವರ ಆಲೋಚನೆಯ ಕೂಸಾಗಿತ್ತು. ಅವರಂತಹ ಧೀಮಂತ ನಾಯಕರು ಇವತ್ತು ನಮಗೆ ರಾಜ್ಯ ಮಟ್ಟದಲ್ಲಿ ಬೇಕಾಗಿದೆ. ಹಳ್ಳಿಗಳ ಬಗ್ಗೆ, ಕೃಷಿಕರ ಬಗ್ಗೆ ಚಿಂತನೆ ಮಾಡಿ, ಅಧಿಕಾರ ಇದ್ದಾಗ ಅದನ್ನು ಸಾಕಾರಗೊಳಿಸಿದಂತಹ ನಾಯಕರ ಪೈಕಿ ಭಾನುಪ್ರತಾಪ್ ಸಿಂಗ್ ಸೇರಿದ್ದಾರೆ. ಇನ್ನು ದಿವಂಗತ ಪುಟ್ಟಸ್ವಾಮಿಗೌಡರ ಬಗ್ಗೆ ಹೇಳುವುದಾದರೆ, ನಾನು ಮತ್ತು ಅವರು ಶಾಸಕರ ಭವನದಲ್ಲಿ ಅಕ್ಕಪಕ್ಕದ ಕೊಠಡಿಗಳಲ್ಲಿ ಇದ್ದೆವು. ಅವರು ನೇರವಾಗಿ ರೈತರನ್ನು ಪ್ರತಿನಿಧಿಸುತ್ತಿದ್ದವರಾಗಿದ್ದರು. ಅವರು MLC ಆಗಿ, MLA ಆಗಿ, ರಾಜ್ಯದ ಅನೇಕ ಇಲಾಖೆಗಳ ಸಚಿವರಾಗಿ ಅಹೋರಾತ್ರಿ ದುಡಿದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಮನೆಯವರಿಗೆ ಆ ದುಃಖವನ್ನು ಭರಿಸುವ ಶಕ್ತಿ ದೊರಕಲೆಂದು ಆಶಿಸುತ್ತೇನೆ. ಮಾನ್ಯ ಪುಟ್ಟಸ್ವಾಮಿಗೌಡರಲ್ಲಿ ಒಂದು ಹೋರಾಟದ ಭಾವನೆ ಮತ್ತು ಮನೋಭಾವ ಯಾವಾಗಲೂ ಇರುತ್ತಿತ್ತು. ಎಷ್ಟು ಪೇಜುಗಳಿದ್ದರೂ ಅವರು ಕುಳಿತುಕೊಂಡು ಬರೆಯುತ್ತಿದ್ದರು. ನಾವು ಅವರನ್ನು ತಮಾಷೆ ಮಾಡುತ್ತಿದ್ದೆವು. ಏನು ಸಾರ್? ತಾವು 50–60 ಪೇಜುಗಳಷ್ಟು ಇದ್ದರೂ ಒಬ್ಬರೇ ಕುಳಿತುಕೊಂಡು ಬರೆಯುತ್ತಿರುತ್ತೀರಿ ಎಂದು ಕೇಳುತ್ತಿದ್ದೆವು. ಅವರೇ ಕುಳಿತು ಬರೆಯುತ್ತಿದ್ದರು. ನಮ್ಮನ್ನೆಲ್ಲಾ ಕರೆದು, ಇದನ್ನು ಓದಪ್ಪ,

ಸರಿಯಾಗಿದೆಯೋ? ಹೇಗೆ? ಎಂದು ಕೇಳುತ್ತಿದ್ದರು. ಆ ರೀತಿಯ ಕೆಲಸವನ್ನು ಈಗಲೂ ಕೂಡ ನಾವು ಮಾಡಲಾಗುತ್ತಿಲ್ಲ ಎಂಬುದು ನನ್ನ ಭಾವನೆಯಾಗಿದೆ. ಆ ಸ್ಥಿತಿಯಲ್ಲಿ ಅವರೇನು ಹೋರಾಟವನ್ನು ಮಾಡಿಕೊಂಡು ಬಂದರೋ, ಅದನ್ನು ನಾವು ಮೆಚ್ಚಲೇಬೇಕು. ಬಹುಶಃ ಅದರಲ್ಲಿ ಅವರು ಯಶಸ್ಸನ್ನು ಕಂಡರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಅವರ ಆ ಹೋರಾಟದ ಭಾವನೆ ಮುಂದಿನ ಪೀಳಿಗೆಗೆ ಉಳಿಯಬೇಕಾಗುತ್ತದೆ. ಸನ್ಮಾನ್ಯ ಧರ್ಮಸಿಂಗ್‌ರವರು ಹೇಳಿದ ಹಾಗೆ ಮಾನ್ಯ ಹಾವನೂರ್‌ರವರು ಕರ್ನಾಟಕ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಅವರು ತಮ್ಮನ್ನೇ ಅರ್ಪಿಸಿಕೊಂಡವರಾಗಿದ್ದರು. ನಮ್ಮ ಭಾವನೆಗಳು ಏನೇ ಇರಲಿ, ನೂರಕ್ಕೆ ನೂರರಷ್ಟು ನಾವು ಅವರನ್ನು ಒಪ್ಪಿದವರಾಗಿದ್ದೇವೆ ಎಂದು ನಾವು ಇಲ್ಲಿ ನಿಂತುಕೊಂಡು ಭಾಷಣ ಮಾಡಿದರೆ ಅದು ಆತ್ಮ ದ್ರೋಹವಾಗುತ್ತದೆ. ಆದರೂ ಕೂಡ ರಾಜ್ಯದಲ್ಲಿ ಯಾರು ಹಿಂದುಳಿದವರು ಇದ್ದರೋ, ಅವರಲ್ಲಿ ಯಾರನ್ನು ಮೀಸಲಾತಿ ಸ್ಥಾನದಲ್ಲಿ ತರಬೇಕಾಗುತ್ತದೆ, ಯಾರ ಪುರೋಭಿವೃದ್ಧಿಗಾಗಿ ಸರ್ಕಾರ ನಡೆಯಬೇಕಾಗುತ್ತದೆ ಎಂಬ ಬಗ್ಗೆ ಅವರು ಕೃಷಿ ಮಾಡದಂಥವರಾಗಿದ್ದರು. ಕಾನೂನು ಪಂಡಿತರಾಗಿ ಈ ರಾಜ್ಯದ ಎಲ್ಲಾ ಸ್ಥಾವರಗಳ, ಎಲ್ಲಾ ಸಮಾಜದ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಈ ರಾಜ್ಯಕ್ಕೆ ಬಹಳ ಪ್ರಮುಖವಾದಂತಹ ಹಿಂದುಳಿದ ವರ್ಗಗಳ ವರದಿಯೊಂದನ್ನು ಕೊಟ್ಟು ರಾಜ್ಯದ ಹಿಂದುಳಿದ ವರ್ಗಗಳ ಜನರಿಗೆ ಇವತ್ತು ಮೀಸಲಾತಿ ನೀಡುವಲ್ಲಿ ಹೇರಳವಾಗಿ ಸಹಾಯ ಮಾಡಿದವರು ಎಂದರೆ ತಪ್ಪಾಗಲಾರದು. ದುರದೃಷ್ಟ, ಅವರು Parliament Member ಆಗಬೇಕೆಂದು ಬಹಳ ಕನಸು ಕಂಡಿದ್ದರು. Chitradurga Constituency ಯಿಂದ Parliament ಗೆ ನಿಲ್ಲಬೇಕು ಎಂದು ಅನೇಕ ಸಲ ಪ್ರಯತ್ನ ಮಾಡಿ ನೋವನ್ನು ಅನುಭವಿಸಿದವರು. ಇಂತಹ ನಾಯಕರು ಕರ್ನಾಟಕಕ್ಕೆ ಹೆಚ್ಚಿಗೆ ಬರಲೆಂದು ಆಶಿಸುತ್ತೇನೆ. ಇನ್ನು ಮಹಾದೇವಿ ತಾಯಿಯವರ ಬಗ್ಗೆ ಹೇಳುವುದಾದರೆ, ಅವರ ಬಗ್ಗೆ ಗೊತ್ತಿಲ್ಲದವರು ಇಲ್ಲ. ಬಯಲುಸೀಮೆ ಕಡೆಯಿಂದ ಏನಾದರೂ ಸಮಾಜ ಸೇವೆ ಮಾಡುತ್ತಿದ್ದ ಅವರನ್ನು ಒಂದು ರೀತಿ ತೆರೇಸಾ ಇದ್ದ ಹಾಗೆ ಆ ಕಡೆ ಭಾವಿಸುತ್ತಿದ್ದರು. ಅಂತಹ ಸಮಾಜ ಕಾರ್ಯಕರ್ತರು ಬೇಕು. ಇನ್ನು ಬಾಂಬ್ ಸ್ಫೋಟದಿಂದ ಮೃತ ಪಟ್ಟವರ ಬಗ್ಗೆ ನಾವೆಲ್ಲಾ ಇಲ್ಲಿ ಮಾತನಾಡಬೇಕಾಗಿದೆ. ನಾವು ಬಾಯಿ ಮಾತಿನ ಮೂಲಕ, ಮೊಸಳೆ ಕಣ್ಣೀರನ್ನು ಸುರಿಸಿ, ಇಂತಹ ಘಟನೆಗಳು ಆಗಬಾರದು ಎಂದು ಮಾತಿನಲ್ಲೇ ನಮ್ಮನ್ನು ನಾವು ಸಮಾಧಾನ ಪಡಿಸಿಕೊಳ್ಳುವ ಸ್ಥಿತಿಗೆ ನಾವು ಬಂದಿದ್ದೇವೆ. ಕುರುಹು ಇದ್ದರೂ ಕೂಡ ಈ ಸ್ಫೋಟಗಳನ್ನು

ತಡೆಯಲಿಕ್ಕೆ ನಮಗೆ ಆಗುತ್ತಿಲ್ಲ. MLA ಗಳನ್ನು ತಡೆಯುವುದು, ನಿಲ್ಲಿಸುವುದು, ಕಳುಹಿಸುವುದು ಮುಂತಾದವುಗಳು ಆಗುತ್ತದೆಯೇ ವಿನಃ ಬೇರೇನೂ ಆಗುತ್ತಿಲ್ಲ. ಇಲ್ಲಿ ಇಂತಹ ಸ್ಥಿತಿ ನಿರ್ಮಾಣವಾಗುತ್ತದೆಯೋ ಅಂತಹ ಕಡೆ ಸರ್ಕಾರ ಇನ್ನೂ ಹೆಚ್ಚು ಗಮನ ಕೊಡಬೇಕಾಗಿದೆ. ಕರ್ನಾಟಕಕ್ಕೂ ಕೂಡ ಇಂಥಹ ದಿವಸ ಬರುವ ಸಮಯ ಬಹಳ ದೂರವಿಲ್ಲ ಎಂಬುದು ನನ್ನ ಭಾವನೆಯಾಗಿದೆ. ಇತ್ತೀಚೆಗೆ ವರದಿಗಳನ್ನು ಓದುತ್ತಿದ್ದರೆ, ಯಾವಾಗ ಏನು ಸ್ಫೋಟ ಆಗುತ್ತದೋ ಎಂಬ ಸ್ಥಿತಿಗೆ ನಾವು ಬಂದಿದ್ದೇವೆ. ಅದನ್ನು ತಡೆಯುವ ಕಡೆ ಸರ್ಕಾರದವರು ಗಮನಹರಿಸಬೇಕೆಂದು ಕೋರುತ್ತೇನೆ. ಸ್ಫೋಟದಿಂದ ಮೃತಪಟ್ಟ ಕುಟುಂಬದವರು ಯಾರಿದ್ದಾರೋ, ಅವರು ಅಮಾಯಕರು, ಏನೂ ಗೊತ್ತಿಲ್ಲದವರು. ಎಲ್ಲೋ ಪ್ರಾರ್ಥನೆ ಆಗುವ ಕಡೆ, ದೇವರಿಗೆ ಪ್ರಾರ್ಥನೆ ಸಲ್ಲಿಸಲಿಕ್ಕೆ ಹೋಗಿ, ತಮ್ಮನ್ನೇ ದೇವರಿಗೆ ಅರ್ಪಿಸಿಕೊಂಡವರು. ಯಾವ ಪಾಪವನ್ನೂ ಮಾಡದ ಜನರನ್ನು ಏತಕ್ಕೆ ಕೊಲ್ಲುತ್ತಾರೋ ಗೊತ್ತಿಲ್ಲ ಅಥವಾ ಸಾಯಿಸಿದವರಿಗೆ ಅದರಿಂದ ಏನು ಸಮಾಧಾನ ಸಿಗುತ್ತದೋ ನನಗೆ ಅರ್ಥವಾಗಿಲ್ಲ. ಈ ಮನೋಸ್ಥಿತಿ ಈ ಸಮಾಜದಲ್ಲಿ ಬದಲಾವಣೆ ಆಗಲಿ ಎಂದು ಆಶಿಸಿ, ಅಂತಹವರಿಗೆಲ್ಲಾ ನನ್ನ ಹಾಗೂ ನನ್ನ ಪಕ್ಷದ ವತಿಯಿಂದ ಸಂತಾಪ ಸೂಚಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಪ್ರತಿ ಸದನದ ಆರಂಭದಲ್ಲೂ ಸಂತಾಪ ಸೂಚನಾ ನಿರ್ಣಯ ತರತಕ್ಕ ಸಂದರ್ಭ ಒದಗಿಬರುವುದು ಬಹಳ ದುರ್ದೈವದ ಸಂಗತಿಯಾಗಿದೆ. ಇದರಿಂದ ಬಹಳ ನೋವಾಗುತ್ತದೆ. ಆದರೂ ಇದೊಂದು ಸಂಪ್ರದಾಯವಾಗಿರುವುದರಿಂದ, ಅದನ್ನು ನೀವು ತರಲೇಬೇಕಾಗಿದೆ. ಈ ರಾಷ್ಟ್ರಕ್ಕೆ ಮತ್ತು ರಾಜ್ಯಕ್ಕೆ ಸೇವೆ ಸಲ್ಲಿಸಿ, ತ್ಯಾಗ ಮಾಡಿದವರು ನಮ್ಮನ್ನು ಅಗಲಿದಾಗ ಅಂತಹವರನ್ನು ಸದನದಲ್ಲಿ ನೆನಸಿಕೊಳ್ಳತಕ್ಕದ್ದು ನಡೆದುಕೊಂಡು ಬಂದಿರತಕ್ಕ ಸಂಪ್ರದಾಯವಾಗಿದೆ. ಇವತ್ತು ಬಹಳ ಅನೇಕ ಗಣ್ಯರ ಬಗ್ಗೆ ನಾವು ಸಂತಾಪ ಸೂಚನೆ ನಿರ್ಣಯವನ್ನು ಅಂಗೀಕರಿಸುವ ವಿಚಾರಕ್ಕೆ ತಾವು ಚಾಲನೆ ಕೊಟ್ಟಿದ್ದೀರಿ. ಬಹಳ ಪ್ರಮುಖವಾಗಿ ಉಸ್ತಾದ್ ಬಿಸ್ಮಿಲ್ಲಾ ಖಾನ್ ಬಗ್ಗೆ ಹೇಳುವುದಾದರೆ, ಸನಾದಿ ಅಪ್ಪಣ್ಣ ಚಿತ್ರದಲ್ಲಿ ಅವರ ವಾದ್ಯವಾದ ಶಹನಾಯ್ ಧ್ವನಿ ಎಲ್ಲರನ್ನೂ ಮೋಡಿ ಮಾಡಿತ್ತು. ಇಡೀ ದೇಶ ಮತ್ತು ವಿಶ್ವದ್ಯಾಂತ ಈ ರೀತಿ ತಮ್ಮ ಶಹನಾಯ್ ವಾದನದಿಂದ ಮೋಡಿ ಮಾಡುವ ಕೆಲಸವನ್ನು ಅವರು ಮಾಡಿದ್ದಾರೆ. ಅದನ್ನು ನೋಡಿದಾಗ ನನಗನ್ನಿಸುತ್ತದೆ, ಅಂತಹ ಒಬ್ಬ ಮಹಾನ್ ವ್ಯಕ್ತಿಯನ್ನು ಕಳೆದುಕೊಂಡು ಈ

ದೇಶ ನಿಜಕ್ಕೂ ತಬ್ಬಲಿಯಾಗಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ನಾನು ಹೇಳುತ್ತಿದ್ದೇನೆ. ಇನ್ನು ಎಲ್.ಜಿ. ಹಾವನೂರ್ ಬಗ್ಗೆ ಹೇಳುವುದಾದರೆ, ಅವರು ಒಬ್ಬ ಅತ್ಯಂತ ವರ್ಣರಂಜಿತ ಮತ್ತು ವಿಶಿಷ್ಟ ವ್ಯಕ್ತಿಯಾಗಿದ್ದರು. ಮಾನ್ಯ ದೇವರಾಜ್ ಅರಸ್‌ರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಅವರ ಸಚಿವ ಸಂಪುಟದಲ್ಲಿ ಅವರು ಕಾನೂನು ಸಚಿವರಾಗಿದ್ದರು. ದಿವಂಗತ ಹಾವನೂರ್‌ರವರು ಹಿಂದುಳಿದ ವರ್ಗಗಳ ಬಗ್ಗೆ ವರದಿ ಕೊಡುವುದರ ಮೂಲಕ ಇಡೀ ರಾಜ್ಯದಲ್ಲಿ ಅವರು ಬಹಳ ಉನ್ನತವಾದಂತಹ ಹೆಸರನ್ನು ಪಡೆದರು. ಬಹಳ ಜನರಿಗೆ ಅದರಲ್ಲೂ ಹಿಂದುಳಿದ ವರ್ಗಕ್ಕೆ, ಸಾಮಾನ್ಯ ಜನರಿಗೆ, ಧ್ವನಿ ಇಲ್ಲದವರಿಗೆ ಆಸರೆಯಾಗಿ ನಿಂತಿದ್ದಂತಹ ಹಾವನೂರ್‌ರವರ ನಿಧನದಿಂದ ನಿಜಕ್ಕೂ ನಮಗೆ ಬಹಳ ನೋವಾಗಿದೆ. ಹಾವನೂರ್ ಹೆಸರಿನಲ್ಲಿ ಈ ಸರ್ಕಾರ ಒಂದು ಸ್ಮಾರಕವನ್ನು ನಿರ್ಮಾಣ ಮಾಡಬೇಕು ಎಂದು ತಮ್ಮ ಮೂಲಕ ನಾನು ಅತ್ಯಂತ ಗಂಭೀರವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಹಾವನೂರ್‌ರವರು ಈ ರಾಜ್ಯದ ಅನೇಕ ಹಿಂದುಳಿದ ವರ್ಗಗಳ ಜನರಿಗೆ ದಾರಿದೀಪ ಆಗಿದ್ದಂತಹ ಮಹಾನ್ ವ್ಯಕ್ತಿಯಾಗಿದ್ದರು. ತಮ್ಮ ಮೂಲಕ ಸರ್ಕಾರಕ್ಕೆ, ಮಾನ್ಯ ಮುಖ್ಯಮಂತ್ರಿಗಳಿಗೆ, ಸಚಿವ ಸಂಪುಟಕ್ಕೆ ಈ ಮೂಲಕ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಹಾವನೂರ್‌ರವರ ಹೆಸರಿನಲ್ಲಿ ಸ್ಮಾರಕ ಆಗಬೇಕಾಗುತ್ತದೆ. ಅದರ ಬಗ್ಗೆ ತಾವು ಚಿಂತನೆ ಮಾಡಬೇಕು ಎಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮಾನ್ಯ ಪುಟ್ಟಸ್ವಾಮಿಗೌಡರು ಗಂಡು ರಾಜಕಾರಣಿ ಆಗಿದ್ದರು. ಅದರಲ್ಲೇನೂ ಬೇರೆ ಮಾತೇ ಇಲ್ಲ. ಯಾವಾಗಲೂ ಅವರು ಪ್ರಸ್ತಾಪಿಸಿದಂತಹ ವಿಚಾರಗಳು, ನಡೆದುಕೊಂಡಂತಹ ರೀತಿ, ನಡೆದು ಬಂದಂತಹ ದಾರಿ, ಇದು ನಿಜಕ್ಕೂ ನಾವು ಮೆಚ್ಚತಕ್ಕಂಥದ್ದು. ಒಬ್ಬ ದಿಟ್ಟ, ಧೀಮಂತ, ಶಕ್ತಿಯುತ ನಾಯಕನನ್ನು ನಾವು ಕಳೆದುಕೊಂಡಿದ್ದೇವೆ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ. ಮಾಜಿ ಶಾಸಕರುಗಳಾದ ಎಂ.ಡಿ.ಶಿವಪುರ್ ಮತ್ತು ಗುರಡ್ಡಿ ನಿಧನರಾಗಿದ್ದಾರೆ. ನಾನು ಅನೇಕ ಸಾರಿ ತಮಗೆ ಹೇಳುತ್ತಿದ್ದೇನೆ. ಮಾಜಿ ಶಾಸಕರುಗಳು ತೀರಿಕೊಂಡರೆ ನಾವು ಇಲ್ಲಿ ಸಂತಾಪ ಮಾಡುತ್ತೇವೆ. ಪ್ರತಿ ಸಭೆಯಲ್ಲೂ ನಾನು ತಮಗೆ ಹೇಳುತ್ತಿದ್ದೇನೆ. ಇದಕ್ಕಾಗಿ ಒಂದು ಸಭೆಯನ್ನು ತಾವು ಕರೆದು, ಈ ಮಾಜಿ ಶಾಸಕರುಗಳ ಪರಿಸ್ಥಿತಿ ಏನು? ಅವರ ಜೀವನ ವ್ಯವಸ್ಥೆ ಏನು? ಅವರ ಮನೆ ಯಾವ ರೀತಿ ಇದೆ? ಅವರ ಮಡದಿ ಮತ್ತು ಮಕ್ಕಳ ಪರಿಸ್ಥಿತಿ ಏನಾಗಿದೆ ಎಂಬುದನ್ನು

ನೋಡಿ, ಅವರಿಗೆ ನಾವು ಸಹಾಯ ಮತ್ತು ಸಹಕಾರ ಮಾಡುವಂತಾದ್ದು ಆಗಬೇಕು. ಶ್ರೀಮಂತರಾಗಿರುವವರ ಬಗ್ಗೆ ನಾವೇನೂ ಗಮನ ಕೊಡಬೇಕಾಗಿಲ್ಲ. ಅನೇಕ ಜನ ಮಾಜಿ ಶಾಸಕರುಗಳು ತಮ್ಮ ನಿವೃತ್ತಿ ವೇತನಕ್ಕೋಸ್ಕರ ಕಾದಿರತಕ್ಕಂತಹ ದಿನಗಳು ಇವೆ, ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ.

ಈ ಬಗ್ಗೆ ತಾವು ತಮ್ಮ ಕಾರ್ಯಾಲಯದ ಮೂಲಕ ತಾವೇ ಅಧ್ಯಕ್ಷರಾಗಿ ಎಲ್ಲಾ ಪಕ್ಷದವರನ್ನು ಸೇರಿಸಿ ಒಂದು ಸಮಿತಿ ಮಾಡಿ, ಒಂದು ದೇಣಿಗೆಯನ್ನು ಮಾಡಿ ಯಾರು ನಿಧನ ಹೊಂದಿರುತ್ತಾರೆ ಅವರ ಶವ ಸಂಸ್ಕಾರದಿಂದ ಹಿಡಿದು ಅವರ ಮನೆಯ ವ್ಯವಸ್ಥೆಯನ್ನು ನೋಡಿಕೊಳ್ಳತಕ್ಕಂಥ ವಿಧಾನವನ್ನು ತಾವು ತಮ್ಮ ಕಾಲದಲ್ಲಿ ಮಾಡಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಮಾನ್ಯ ಎಸ್.ಕೆ.ಕರೀಂಖಾನ್ ರವರು ಈ ರಾಜ್ಯಕ್ಕೆ ಜನಪದ ಲೋಕಕ್ಕೆ ಅಪಾರವಾದಂಥ ಸೇವೆಯನ್ನು ನೀಡಿದಂತವರು. ಚಲನಚಿತ್ರರಂಗದಲ್ಲಿ ಗೀತೆಗಳನ್ನು ಬರೆಯುವಂತಹ ವಿಚಾರದಲ್ಲಿ ಅತ್ಯುನ್ನತ್ತವಾದ ಸ್ಥಾನವನ್ನು ಪಡೆದಂತಹ ವ್ಯಕ್ತಿ. ಅವರಿಗೆ ಕೊನೆ ಉಸಿರಿರುವವರೆಗೂ ಅವರಿಗೆ ನಾವು ಮನೆಯನ್ನು ಕೊಡುವುದಕ್ಕಾಗಲಿಲ್ಲ. ಅದಕ್ಕೆ ದ್ವಂದ್ವವಾಯಿತು. ಮಾತುಕತೆಯಾಯಿತು. ಅವರಿಗೆ ಮನೆ ಕೊಡಬೇಕೇ ಬೇಡವೇ ಎಂದು ಹೇಳುತ್ತಾ ಕೊನೆಗೂ ಅವರು ಕಣ್ಣೀರಿನಲ್ಲಿ ತಮ್ಮ ಜೀವವನ್ನು ಬಿಡಬೇಕಾದಂತಹ ಪರಿಸ್ಥಿತಿ ಬಂತು. ಆದರೆ ಇವತ್ತು ಅವರಿಗೆ ಮನೆಯನ್ನು ಕೊಡುವುದಕ್ಕಾಗಲಿಲ್ಲ. ಅವರಿಗೆ ಕೊಟ್ಟಿದ್ದರೆ ಅವರ ವಂಶಸ್ಥರು ಯಾರಾದರೂ ತೆಗೆದುಕೊಳ್ಳಲಿ ನಮಗೇನು? ಅವರು ಬದುಕಿರುವಾಗ ಮನೆಯನ್ನು ಕೊಡುತ್ತೇವೆನ್ನುವಂತಹ ತೀರ್ಮಾನಕ್ಕೆ ಬರಬೇಕಾಗಿತ್ತು. ನಾನು ಮಾನ್ಯ ಡಿ.ಟಿ. ಜಯಕುಮಾರ್ ಅವರ ಹತ್ತಿರ ಮಾತನಾಡಿ, ಮಾನ್ಯ ಕರೀಂಖಾನ್ ರವರಿಗೆ ಒಂದು ಮನೆಯನ್ನು ಅವರು ಹಾಸಿಗೆಯ ಮೇಲೆ ಮಲಗಿ ಕೊಂಡಿದ್ದಾಗಲಾದರೂ ಹೋಗಿ ನಾವು ಅವರಿಗೆ ಮನೆಯನ್ನು ಕೊಟ್ಟಿದ್ದೇವೆಂದು ಹೇಳೋಣ ಎಂದು ಇತ್ತು. ಆದರೆ ಅದನ್ನೂ ಕೂಡ ಮಾಡುವುದಕ್ಕೆ ಆಗಲಿಲ್ಲ. ನಾವು ಇಲ್ಲಿ ಸಂತಾಪಸೂಚನೆಯನ್ನು ಮಾಡುವುದರಲ್ಲಿ ಅರ್ಥವಿಲ್ಲ. ಶ್ರದ್ಧಾಂಜಲಿ ಮಾಡುವುದರಲ್ಲಿ ಅರ್ಥವಿಲ್ಲ. ಅವರು ಬದುಕಿರುವಾಗ ನಾವು ಅವರಿಗೆ ಯಾವುದೇ ವ್ಯವಸ್ಥೆ ಮಾಡದೆ ಸತ್ತ ಮೇಲೆ ನಾವಿಲ್ಲಿ ಮೊಸಳೆ ಕಣ್ಣೀರು ಸುರಿಸತಕ್ಕಂಥಾದ್ದು ಸರಿಯಲ್ಲ. ಅದರಿಂದ ನನಗಂತೂ ನೋವಾಗಿದೆ, ಇನ್ನು ಮುಂದೆಯಾದರೂ ಈ ವಿಚಾರದಲ್ಲಿ ತಾವು ಇದರ ಬಗ್ಗೆ ನಾಯಕತ್ವ ವಹಿಸಿ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಾ, ಇವತ್ತು ತಾವೇನು

ಸಂತಾಪ ಸೂಚನಾ ನಿರ್ಣಯವನ್ನು ತಂದಿದ್ದೀರಿ ಅದಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೇ, 14 ಜನ ಹಿರಿಯರು ಮತ್ತು ಬಾಂಬ್ ಸ್ಫೋಟದಿಂದ ಮೃತಪಟ್ಟಿರುವಂತಹ ಈ ಸಂತಾಪಸೂಚನಾ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಅದರಲ್ಲಿ ಬಹಳ ಪ್ರಮುಖವಾಗಿ ಶ್ರೀ ಉಸ್ತಾದ್ ಬಿಸ್ಮಿಲ್ಲಾ ಖಾನ್, ಶ್ರೀ ಭಾನು ಪ್ರತಾಪ್ ಸಿಂಗ್, ಶ್ರೀ ಎಲ್.ಜಿ. ಹಾವನೂರು ಹಾಗೂ ಮಾನ್ಯ ಕರೀಂಖಾನ್ ರವರು ಮೃತಪಟ್ಟಿದ್ದಾರೆ. ನನಗೆ ಬೇರೆಯವರ ಬಗ್ಗೆ ಅಷ್ಟಾಗಿ ಹೆಚ್ಚು ಗೊತ್ತಿಲ್ಲ. ಹಾಗಾಗಿ ನಮ್ಮ ಸಾಂಸ್ಕೃತಿಕ ಲೋಕದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದವರೆಂದರೆ ಶ್ರೀ ಉಸ್ತಾದ್ ಬಿಸ್ಮಿಲ್ಲಾ ಖಾನ್ ರವರು. ಶಹನಾಯಿ ಎಂಬ ಪರಿಕರವನ್ನು ಯಾರೂ ನೋಡದೆ ಇದ್ದಂತಹ ಸಂದರ್ಭದಲ್ಲಿ ಅಂತರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟಂತಹ ಮನುಷ್ಯ ಎಂದರೆ ಉಸ್ತಾದ್ ಬಿಸ್ಮಿಲ್ಲಾ ಖಾನ್ ರವರು. ಬಹಳ ಸರಳವಾದ ಜೀವನ ನಡೆಸಿ, ಕೊನೆ ಗಳಿಗೆಯವರೆಗೆ ತಾನು ನಂಬಿದಂತಹ ತತ್ವಗಳಿಗೆ ಅಂಟಿಕೊಂಡು ಬನಾರಸ್‌ನಲ್ಲೇ ಮರಣ ಹೊಂದಿದ ಆ ಮಹಾಚೇತನಕ್ಕೆ ನಾವು ಎಷ್ಟೇ ರೀತಿಯಾಗಿ ಅವರಿಗೆ ಸಂತಾಪ ಸೂಚನೆ ಮೂಲಕ ಗೌರವವನ್ನು ಸಲ್ಲಿಸಿದರೂ ಸಾಲದು ಎನ್ನುವುದು ನನ್ನ ಅಭಿಪ್ರಾಯ. ಅವರು ಒಂದು ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದ್ದಂತಹ ಮನುಷ್ಯ. ಅಷ್ಟೊಂದು ಉನ್ನತ ಸ್ಥಾನವನ್ನು ಗಳಿಸಿ, ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆದವರು. ಇನ್ನು ಭಾನು ಪ್ರತಾಪ ಸಿಂಗ್ ರವರು ಕೃಷಿ ರಂಗಕ್ಕೆ ಅಪಾರ ಸೇವೆಯನ್ನು ಸಲ್ಲಿಸಿದವರು. ನಮ್ಮ ದೇಶದ ಕೃಷಿರಂಗದಲ್ಲಿ ಇರುವಂತಹ ಸಮಸ್ಯೆಗಳು, ಅದರಲ್ಲಿ ಪ್ರಮುಖವಾಗಿ ರೈತರು ಅನುಭವಿಸುತ್ತಿರತಕ್ಕಂತ ಕಷ್ಟನಷ್ಟಗಳ ಬಗ್ಗೆ ಆಳವಾಗಿ ಅಧ್ಯಯನವನ್ನು ನಡೆಸಿದಂತಹ ಒಬ್ಬ ಸಕ್ರಿಯ ರಾಜಕಾರಣಿ. ರಾಜಕಾರಣಿಗಳಲ್ಲಿ ಅಂತಹ ಆಳವಾದಂತಹ ಅಧ್ಯಯನವನ್ನು ನಡೆಸತಕ್ಕಂತಹ ಹವ್ಯಾಸವನ್ನು ಇಟ್ಟುಕೊಂಡಿರುವವರು ಬಹಳ ಕಡಿಮೆ. ಆದರೆ ಕೃಷಿರಂಗಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಭಾನು ಪ್ರತಾಪ ಸಿಂಗ್ ರವರು ಬರೆದಿರತಕ್ಕಂಥ ಪುಸ್ತಕಗಳು, ಅವರು ಮಾಡಿರತಕ್ಕಂಥ ಸಂಶೋಧನೆಗಳು ನಿಜವಾಗಲೂ ಈ ದೇಶದ ಕೃಷಿರಂಗಕ್ಕೆ ಬಹಳ ಅತ್ಯಮೂಲ್ಯವಾದಂತಹ ಕೊಡುಗೆಯನ್ನು ಕೊಟ್ಟಿದೆ. ಅವರ ನೇತೃತ್ವದಲ್ಲಿ ಅಂದಿನ ಕೇಂದ್ರ ಸರ್ಕಾರ ಈ ಕೃಷಿ ಉತ್ಪನ್ನಗಳ ಬೆಲೆ ನಿಗದಿ ಮಾಡತಕ್ಕಂಥ ಒಂದು ಕಮಿಷನ್ ಅನ್ನು ನೇಮಕ ಮಾಡಿತ್ತು. ಯಾವ್ಯಾವ

ಕೃಷಿ ಉತ್ಪನ್ನಗಳಿಗೆ ಯಾವ ರೀತಿಯಾದ ದರವನ್ನು ನಿಗದಿ ಮಾಡಬೇಕು? ದರವನ್ನು ನಿಗದಿ ಮಾಡಬೇಕಾದರೆ ಅದಕ್ಕೆ ಅನುಸರಿಸಬೇಕಾದಂತಹ ವಿಧಾನಗಳೇನು? ಅದರ ಬಗ್ಗೆ ಬಹಳ ಸ್ಪಷ್ಟವಾಗಿ ವಿವರಗಳನ್ನು ಹೇಳಿದ್ದಾರೆ. ಅದೆಲ್ಲವನ್ನೂ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಹಾಗಾಗಿ ಈ ದೇಶದ ಕೃಷಿರಂಗಕ್ಕೆ ಅವರು ಸಲ್ಲಿಸಿದಂತಹ ಸೇವೆ ಏನಿದೆ, ಅದು ನಿಜವಾಗಿ ಕೂಡ ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುವುದಷ್ಟೇ ಅಲ್ಲ ಅವರಿಗೆ ಉನ್ನತವಾದ ಸ್ಥಾನವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಇನ್ನು ಶ್ರೀ ಎಲ್.ಜಿ. ಹಾವನೂರು ರವರು ಕರ್ನಾಟಕ ರಾಜ್ಯದಲ್ಲಿ ಸಾಮಾಜಿಕ ನ್ಯಾಯದ ಬಗ್ಗೆ ಒಂದು ವೈಜ್ಞಾನಿಕವಾದ ಪರಿಕಲ್ಪನೆಯನ್ನು ಮೊಟ್ಟಮೊದಲಿಗೆ ಮೂಡಿಸಿದಂತಹ ವ್ಯಕ್ತಿ. ಮಾನ್ಯ ದೇವರಾಜು ಅರಸುರವರ ಜನಪರ ರಾಜಕಾರಣದಲ್ಲಿ ಬೆಳೆದು ಬಂದಂತಹ ಹಾವನೂರುರವರು, ನಮ್ಮ ಸಮಾಜದಲ್ಲಿ ಯಾರ ಕಣ್ಣಿಗೂ ಕಾಣದೇ ಇರುವಂತಹ, ಹಲವಾರು ವಿಭಾಗದ ಜನರು ಏನು ಸಾಮಾಜಿಕ ಹಾಗೂ ಆರ್ಥಿಕವಾಗಿ ಶೋಷಣೆಗೆ ಒಳಗಾಗಿದ್ದಾರೆ, ಯಾರು ಕಣ್ಣಿಗೆ ಕಾಣದೆ ಇರುವವರನ್ನು ಸಂಶೋಧನೆ ಮಾಡಿ ಅವರೆಲ್ಲರನ್ನೂ ಕೂಡ ಪಟ್ಟಿ ಮಾಡಿ ರಾಜ್ಯ ಸರ್ಕಾರಕ್ಕೆ ಮತ್ತು ಕೇಂದ್ರ ಸರ್ಕಾರಕ್ಕೆ ಇಂತಹವರು ಕೆಲವು ಜನ ಈ ದೇಶದಲ್ಲಿ ಇದ್ದಾರೆ. ಈ ದೇಶದ ಸಂಪತ್ತನ್ನು ಉತ್ಪಾದನೆ ಮಾಡುವಂತಹ ಬಡವರು ಯಾರ ಕಣ್ಣಿಗೂ ಕಾಣದೇ ಇವತ್ತು ನಿರ್ಜೀವವಾಗಿ ಬದುಕುತ್ತಿರುವಂತಹ ಸಂದರ್ಭದಲ್ಲಿ ಸಮಾಜದಲ್ಲಿ ಅವರಿಗೆ ಸ್ಥಾನವನ್ನು ಕಲ್ಪಿಸಿಕೊಟ್ಟು, ಅವರು ಸ್ವತಂತ್ರವಾಗಿ ಬದುಕುವಂತಹ ಒಂದು ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು ಎಂದು ಹೇಳುವಂತಹ ವಾದವನ್ನು ವರದಿ ಮುಖಾಂತರ ಮಂಡಿಸಿ ಅವರಿಗೆ ಜೀವದಾನವನ್ನು ಕೊಟ್ಟಂತಹ ಮಹಾನ್ ವ್ಯಕ್ತಿ ಮಾನ್ಯ ಹಾವನೂರ್ ರವರು. ಅವರು ಕಾನೂನು ಪಂಡಿತರಾಗಿದ್ದರು. ಅವರ ಹೆಸರಿನಲ್ಲಿ ಒಂದು ಶಾಲಾ ಕಾಲೇಜು ಕೂಡ ಇದೆ. ಆದರೆ ಸರ್ಕಾರ ಮಾತ್ರ ಅವರ ಸಾಧನೆಯನ್ನು ಗುರುತಿಸಲಿಲ್ಲ. ಅವರಿಗೆ ಎಷ್ಟು ಗೌರವವನ್ನು ಕೊಡಬೇಕಾಗಿತ್ತೋ, ಕರ್ನಾಟಕ ರಾಜ್ಯದಲ್ಲಿ ಅವರಿಗೆ ಯಾವ ಸ್ಥಾನವನ್ನು ಕೊಡಬೇಕಾಗಿತ್ತೋ ಆ ಸ್ಥಾನವನ್ನು ಕೊಡುವುದರಲ್ಲಿ ಎಲ್ಲಾ ಸರ್ಕಾರಗಳು ಕೂಡ ವಿಫಲವಾಗಿವೆ. ಹಾಗಾಗಿ ನಾನು ತಮ್ಮ ಮುಖಾಂತರ ವಿನಂತಿಸಿಕೊಳ್ಳುವುದೇನೆಂದರೆ ಅವರು ಸ್ವತಃ ಅಧ್ಯಯನಶೀಲರು. ಅವರ ಹೆಸರಿನಲ್ಲಿ ಒಂದು ಸಾಮಾಜಿಕ ಅಧ್ಯಯನ ಕೇಂದ್ರವನ್ನು ಸ್ಥಾಪನೆ ಮಾಡತಕ್ಕಂಥಾದ್ದು ಬಹಳ ಅನಿವಾರ್ಯತೆ ಇದೆ. ಇವತ್ತಿನ ಪರಿಸ್ಥಿತಿಯಲ್ಲಿ ಅದು ಬಹಳ ಪ್ರಸ್ತುತ ಇದೆ. ಆದುದರಿಂದ ನಾನು ತಮ್ಮ

ಮುಖಾಂತರ ಈಗಿನ ಸರ್ಕಾರವನ್ನು ವಿನಂತಿಸಿಕೊಳ್ಳುವುದೇನೆಂದರೆ, ಮಾನ್ಯ ಎಲ್.ಜಿ. ಹಾವನೂರ್ ಅವರ ಹೆಸರಿನಲ್ಲಿ ಒಂದು ಸಾಮಾಜಿಕ ಅಧ್ಯಯನ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇನ್ನು ಮಾನ್ಯ ಕರೀಂಖಾನ್ ಅವರ ಬಗ್ಗೆ ನಾವು ಇಷ್ಟೆಲ್ಲಾ ಹೊಗಳುತ್ತಿದ್ದೇವೆ. ಆದರೆ ಅವರ ಕಡೆ ದಿನಗಳಲ್ಲಿ ಎಲ್ಲಾ ಸರ್ಕಾರಗಳು ಅವರ ಬಗ್ಗೆ ತೋರಿಸಿರುವಂತಹ ಧೋರಣೆ ನಿಜವಾಗಿಯೂ ಕೂಡ ಯಾರೂ ಕೂಡ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಅವರು ಕೊಟ್ಟಂತಹ ಸೇವೆಯನ್ನು ನೋಡಿದರೆ. ಅವರು ಜೀವನದ ಕಡೆ ದಿವಸಗಳಲ್ಲಿ ಅವರು ಯಾವ ಸ್ಥಿತಿಯಲ್ಲಿ ಇದ್ದರು? ಅವರು ಹೇಗೆ ಸತ್ತರು ಎಂದು ನೋಡಿದರೆ ಅವರಿಗೆ ಮನೆ ಕೊಡುವುದಕ್ಕೆ ಕೂಡ ನಮ್ಮ ಕೈಯಲ್ಲಿ ಆಗಲಿಲ್ಲ. ನಾವು ಈ ರಾಜ್ಯದಲ್ಲಿ ಯಾರ್ಯಾರಿಗೋ ಏನೇನೋ ಕೊಟ್ಟೆವು. ಆದರೆ ಇವರಿಗೆ ಏನೂ ಕೊಡದೆ ಇರುವಂತಹ ಅಸಹಾಯಕತೆಯನ್ನು ಪ್ರದರ್ಶನ ಮಾಡಿದ್ದೇವೆ. ಇದು ಅಕ್ಷಮ್ಯ ಅಪರಾಧ ಎಂದು ನನ್ನ ಭಾವನೆ. ಈ ಎಲ್ಲಾ 14 ಮಂದಿ ಹಿರಿಯರಾದ ಸ್ವತಂತ್ರ ಹೋರಾಟಗಾರರು, ಮಾಜಿ ಶಾಸಕರು, ಸಮಾಜ ಸೇವಕರು ಮತ್ತು ಬಾಂಬ್ ಸ್ಫೋಟ ಮಲೆಗಾಂವ್‌ನಲ್ಲಿ ಮಡಿದವರಿಗೆ ಇವರೆಲ್ಲರಿಗೂ ಕೂಡ ಸಂತಾಪವನ್ನು ಸೂಚಿಸುತ್ತೇನೆ. ಈ ಬಾಂಬ್ ಸ್ಫೋಟ ಏನಿದೆ ಎಲ್ಲರೂ ಕೂಡ ಅಸಹ್ಯ ಪಡುವಂತಾದ್ದು. ಇವತ್ತು ಯಾವ ಸಂದರ್ಭದಲ್ಲಿ ಯಾವ್ಯಾವ ರಾಜ್ಯದಲ್ಲಿ ಏನೇನು ಆಗುತ್ತದೆ ಎಂದು ಊಹೆ ಮಾಡದೇ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಈ ಬಾಂಬ್ ಸ್ಫೋಟ ಸರಣಿ ಏನು ನಡೆಯುತ್ತದೆ, ಇದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಿ ಇದನ್ನು ತಡೆಯುವಂತಹ ಕ್ರಮಕ್ಕೆ ಸರ್ಕಾರ ಮುಂದಾಗಬೇಕು. ಕೇವಲ ಸಂತಾಪ ಸೂಚನೆ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಆ ನಿಟ್ಟಿನಲ್ಲಿ ಈಗಾಗಲೇ ಕರ್ನಾಟಕ ರಾಜ್ಯಕ್ಕೂ ಬೆದರಿಕೆ ಬಂದಿದೆ. ಇಲ್ಲಿ ಕೂಡ ಉಗ್ರರು ಬಂದು ಬೆಂಗಳೂರಿನಲ್ಲಿ ವಿಜ್ಞಾನ ಕೇಂದ್ರದ ಮೇಲೆ ನಡೆಸಿರತಕ್ಕಂಥ ಧಾಳಿ. ಮತ್ತೆ ಎಚ್ಚರಿಕೆಯನ್ನೂ ಕೂಡ ಕೊಟ್ಟಿದ್ದು, ಐಟಿ:ಬಿಟಿ, ವಿಧಾನಸೌಧದ ಮೇಲೆ ಧಾಳಿ ಮಾಡುತ್ತಾರೆ ಎನ್ನುವ ಸುದ್ದಿ ಬಂದಿದೆ. ಅದರ ಬಗ್ಗೆ ಕೇಂದ್ರ ಸರ್ಕಾರದ ಗೃಹ ಸಚಿವಾಲಯದಿಂದ ಸುದ್ದಿ ಕೂಡ ಬಂದಿದೆ. ಹಾಗಾಗಿ ಇಂತಹ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಸರ್ಕಾರ ಇದರ ಬಗ್ಗೆ ಮೊದಲೇ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಘಟನೆ ಆದಮೇಲೆ ತನಿಖೆ ಮಾಡಿಸುತ್ತೇವೆ ಎಂದರೆ ಪ್ರಯೋಜನವಾಗುವುದಿಲ್ಲ. ಅದಕ್ಕೆ ಮೊದಲೇ ಬೇಕಾದಂತಹ ಕ್ರಮವನ್ನು ಮಾಡಿ

ಅದನ್ನು ನಿಗ್ರಹಿಸುವಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಬಾಂಬ್ ಸರಣಿಯಲ್ಲಿ ಮೃತಪಟ್ಟವರಿಗೆ ಸಂತಾಪವನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಅಧ್ಯಕ್ಷರೆ, ನಿಧನ ಹೊಂದಿದ 14 ಜನ ಹಿರಿಯರಿಗೆ ಹಾಗೂ ಬಾಂಬ್ ಸ್ಫೋಟದಲ್ಲಿ ಮೃತಪಟ್ಟವರಿಗೆ ಆತ್ಮ ಶಾಂತಿಯನ್ನು ಕೋರುತ್ತಾ, ಅಷ್ಟು ಜನರಿಗೆ ಆತ್ಮಶಾಂತಿ ಸಿಕ್ಕಿದ್ದೆಯಾ ಎಂದು ನೋಡುವುದಕ್ಕೆ ಆಗುವುದಿಲ್ಲ. ಆದರೆ ಯಾರ್‍ಯಾರು ತೀರಿ ಹೋಗಿದ್ದಾರೆ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಹೇಳುತ್ತೇವೆ. ನಾವು ಯಾವಾಗಲೂ ವೇದಾಂತ, ಸಿದ್ಧಾಂತ ಹಾಗೂ ಭಗವದ್ಗೀತೆಯಲ್ಲಿ ಇರುವಂತೆ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಉಪದೇಶ ಹೇಳುತ್ತೇವೆ. ಈಗ ಬಾಂಬ್ ಬ್ಲಾಸ್ಟ್‌ನಲ್ಲಿ ಸತ್ತವರಿಗೆ ನಾವು ಬೆಳಗಾಂ ಗೆ ಬಂದು ಅವರೆಲ್ಲರಿಗೂ ಸಂತಾಪ ಸೂಚನೆಯನ್ನು ಮಾಡಿದ್ದೇವೆ. ಈ ವಿಚಾರದಲ್ಲಿ ಒಂದು ಸ್ಟ್ರಾಂಗ್ ಡಿಸಿಷನ್ ತೆಗೆದುಕೊಳ್ಳಬೇಕು. ಗೀತೋಪದೇಶ ಹೇಳಿಕೊಂಡು ಹೋದರೆ ಆಗುವುದಿಲ್ಲ.

ಗೀತೆಯಲ್ಲಿ ಏನು ಇದೆಯೆಂದರೆ, ಏನೇನು ನಡೆಯಬಹುದು, ಅದು ಚೆನ್ನಾಗಿ ನಡೆಯುತ್ತದೆ, ಏನೇನು ನಡೆದಿದೆ, ಅದು ಚೆನ್ನಾಗಿ ನಡೆದಿದೆ. ಈ ಉಪದೇಶವನ್ನು ತೆಗೆದುಕೊಂಡು ಹೋಗಿ ಬಾಂಬ್ ಬ್ಲಾಸ್ಟ್ ಆಗಿರುವ ಜನರ ಮುಂದೆ ಏನೇನು ನಡೆದಿದೆ, ಅದು ಚೆನ್ನಾಗಿ ನಡೆದಿದೆಯೆಂದು ಹೇಳಿದರೆ ಅದು ಸಂತಾಪ ಸೂಚನೆಯಾಗುವುದಿಲ್ಲ. ಆದುದರಿಂದ ಇದರ ಬಗ್ಗೆ strong decision ತೆಗೆದುಕೊಳ್ಳಬೇಕು. ನಾವು ಇವರ ಬಗ್ಗೆ ಸಂತಾಪ ಸೂಚನೆಯನ್ನು ಹೇಳಿಕೊಂಡು ಹೋದರೆ ನಮಗೆ ಸಂತೋಷ ಸಿಗುವುದಿಲ್ಲ. ಅದನ್ನು ಸರಿಪಡಿಸುವುದಕ್ಕೆ, ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿದರೆ, ಆ ಆತ್ಮಗಳಿಗೆ ನಿಜವಾಗಲೂ ಶಾಂತಿ ಸಿಗುತ್ತದೆಂದು ಹೇಳುತ್ತೇನೆ. ಈಗ ತಾವು ಕೊಟ್ಟಿರುವ ಸಂತಾಪ ಸೂಚನೆಯ ಪಟ್ಟಿ ಏನು ಇದೆ, ಆ ಪಟ್ಟಿಗೆ ನನ್ನ ಮತ್ತು ನನ್ನ ಪಕ್ಷದಿಂದ ಈ ಪಟ್ಟಿಯಲ್ಲಿರುವ ಎಲ್ಲಾ ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಹೇಳುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಾನೂನು ಮತ್ತು ಸಂಸದೀಯ ಹಾಗೂ ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, ಇಂದಿನ ಸಭೆಯಲ್ಲಿ ತಾವು ತಂದಿರುವಂತಹ ಸಂತಾಪ ಸೂಚನೆಗೆ ಶ್ರದ್ಧಾಂಜಲಿಯನ್ನು ಅರ್ಪಿಸುವಂತಹ ಈ ಸೂಚನೆಗೆ ಸಂಪೂರ್ಣವಾದ ಸಹಮತವನ್ನು ನಾನು ಅರ್ಪಿಸುತ್ತಿದ್ದೇನೆ. ಇದರಲ್ಲಿ ಉಸ್ತಾದ್ ಬಿಸ್ಮಿಲ್ಲಾ ಖಾನ್‌ರವರು ಒಬ್ಬ ದಿಗ್ವಿಜಯಿ ಹಾಗೂ ದಿಗ್ಗಜರು ಕೂಡ ಆಗಿದ್ದಾರೆ. ಪ್ರಾಯಶಃ ವಾರಣಾಸಿ ದೋಹಾಗಳನ್ನು ಬರೆದಂತಹ ಕಬೀರ ಮತ್ತು ಬಿಸ್ಮಿಲ್ಲಾ

ಖಾನ್‌ರವರನ್ನು ಯಾವ ಕಾಲಕ್ಕೂ ಮರೆಯುವುದಕ್ಕೆ ಆಗುವುದಿಲ್ಲ. ಇವತ್ತು ಒಂದು ಹೊಸ ಗಾದೆ ಮಾತನ್ನು ನಿರ್ಮಾಣ ಮಾಡುವಂತಹ ರೀತಿಯಲ್ಲಿ ಇವತ್ತು ವಾರಣಾಸಿಯಲ್ಲಿ ಯೋಚನೆ ನಡೆದಿದೆ. ನಮಗೆಲ್ಲರಿಗೂ ಗೊತ್ತಿರುವಂತೆ ವಾರಣಾಸಿ ಎಂದರೆ ಬಿಸ್ಮಿಲ್ಲಾ ಖಾನ್, ಗಾಯಿ, ಗಲ್ಲಿ ಮತ್ತು ಸನ್ಯಾಸಿ ಎಂದು ಕರೆಯುತ್ತಾರೆ. ನಮ್ಮ ಭಾರತೀಯರ ಮನಸ್ಸು ಬಹಳ ವಿಚಿತ್ರವಾಗಿರುವಂಥಾದ್ದು. ಅಲ್ಲಿ ವಿಶ್ವನಾಥನ ದೇವಾಲಯ ಇದೆ. ಸಣ್ಣ ಸಣ್ಣ ಗಲ್ಲಿಗಳು ಇವೆ, ಆಕಳುಗಳು ಯಥೇಚ್ಚವಾಗಿ ಇರುತ್ತವೆ. ಹಾಗೇ ಸನ್ಯಾಸಿಗಳ ಜೊತೆಗೆ ಒಂದು ಲೈಂಗಿಕ ಕಾರ್ಯಕರ್ತರ ಒಂದು ದೊಡ್ಡ ಕೆಂಪು ದ್ವೀಪದ ಪ್ರದೇಶವೂ ಕೂಡ ಇರುತ್ತದೆ. ಅಂದರೆ ಈ ರೀತಿಯ ಒಂದು ಪವಿತ್ರವಾದ ಸ್ಥಳದಲ್ಲೂ ಕೂಡ ಈ ಭೋಗ ಜೀವನದ ಬಗ್ಗೆಯಾಗಲಿ ಅಥವಾ ವಾತ್ಸಾಯನನ ಬಗ್ಗೆ ಆಗಲಿ ನಮ್ಮವರ ಮನಸ್ಸುಗಳು ಹೇಗೆ ಇರುತ್ತವೆಯೆಂಬ ಬಗ್ಗೆ ಜೋತ್ಯಕವಾಗಿದ್ದರೆ, ಇದರ ಜೊತೆಗೆ ಈಗ ಕಬೀರರನ್ನು ಹಾಗೂ ಬಿಸ್ಮಿಲ್ಲಾ ಖಾನ್‌ರವರನ್ನು ಸೇರಿಸಲೇ ಬೇಕಾಗುತ್ತದೆ. ತಾನ್‌ಸೇನ್ ಪ್ರಶಸ್ತಿಯನ್ನು ಕೊಡುವಂತಹ ಸಂದರ್ಭದಲ್ಲಿ ಬಿಸ್ಮಿಲ್ಲಾ ಖಾನ್‌ರವರು ಈ ಮಾತುಗಳನ್ನು ಆಡಿದರು. ಪ್ರಾಯಶಃ ಸಂಗೀತಕ್ಕೆ ಒಂದು ಜೀವ ಇದೆಯೆಂದು ಆಗಿದ್ದರೆ, ತಾನ್‌ಸೇನ್ ಒಂದು ದಂತ ಕತೆಯಲ್ಲ. ಅವರು ಮೇಘ ರಾಗವನ್ನು ಹಾಡಿದರೆ ಮಳೆ ಸುರಿಯುತ್ತದೆ ಎನ್ನುವುದಾಗಿದ್ದರೆ, ಅಂತಹ ಶಕ್ತಿಯನ್ನು ವಿಶ್ವನಾಥ ನನಗೆ ಕೊಡಲಿ, ಎಂದು ಪ್ರಾರ್ಥನೆ ಮಾಡಿದರು. ಅಂತಹ ಒಬ್ಬ ಅತ್ಯಂತ ಹಿರಿಯ ಸಂಗೀತಗಾರರು ಆಗಿದ್ದರು. ನಮಗೆಲ್ಲರಿಗೂ ಗೊತ್ತಿರುವಂತೆ ಸಂಗೀತವೂ ಅವ್ಯಕ್ತವಾಗಿರುತ್ತದೆ. "Heard melodies are sweet; unheard are more sweeter" ಎಂದು ಕರೆಯುತ್ತಾರೆ. ನಾವು ಕೇಳುವ ಸಂಗೀತ ಅದು ನಮ್ಮನ್ನು ಮತ್ತೊಂದು ಜಗತ್ತಿಗೆ ತೆಗೆದುಕೊಂಡು ಹೋಗಬೇಕಾಗಿರುವುದ ರಿಂದ, ಅತ್ಯುತ್ತಮವಾದ ಸಂಗೀತ ಯಾವುದೆಂದರೆ, ಅದು ನಿಶ್ಯಬ್ದವೆಂದು ಕರೆಯುತ್ತೇವೆ, ಅಂದರೆ, ಆ ನಾದ ಓಂಕಾರ ಸ್ವರೂಪದ ನಾದ ಅದು ನಮ್ಮನ್ನು ಸಮಾಧಿ ಸ್ಥಿತಿಗೆ ತೆಗೆದುಕೊಂಡು ಹೋಗುವಂತಹ ರೀತಿಯಲ್ಲಿ ಆ ಒಂದು ದೈವಿ ಶಕ್ತಿಗೆ ಪ್ರೇರೆಪಣೆ ಮಾಡುವಂಥಾದ್ದು ಆಗಿರುತ್ತದೆ. ಆ ಕಾರಣಕ್ಕಾಗಿ ಶಹನಾಯ್‌ಯನ್ನು ನಮ್ಮ ಭಾರತೀಯ ಮುಖವೇಣಿಯೆಂದು ಕರೆಯುತ್ತೇವೆ. ಭಾರತೀಯರಾಗಿರತಕ್ಕಂಥ ಒಂದು ಗಾರ್ಯ ಉಪಕರಣ ಅದು. ಕೊಳಲು ಮತ್ತು ಶಹನಾಯ್ ಅತ್ಯಂತ ಶಾಸ್ತ್ರೀಯ ಬದ್ಧಕ್ಕೆ ಸಂಗೀತ ನುಡಿಸುವಂತಹ ಉಸ್ತಾದ್ ರವರಿಗೆ ಭಾರತ ರತ್ನವನ್ನು ಕೊಡುವುದರ ಮೂಲಕ ನಮ್ಮ ಜನತೆ ಮತ್ತು ಭಾರತ ಸರ್ಕಾರ, ಅವರು ತಮ್ಮ ಧನ್ಯತೆಯ ಮನೋಭಾವವನ್ನು ವ್ಯಕ್ತ

ಮಾಡಿದ್ದಾರೆ. ಅವರು ಕರ್ನಾಟಕದೊಟ್ಟಿಗಿರುವಂತಹ ಸಂಪರ್ಕದ ಬಗ್ಗೆ, ಹಿಂದಿನ ಸರ್ಕಾರದವರೂ ಕೂಡ ಅವರಿಗೆ ಎರಡು ಲಕ್ಷ ರೂಪಾಯಿಗಳನ್ನು ಕಳುಹಿಸುವಂಥಾದ್ದು, ಇದು ಎಲ್ಲಾ ಸಣ್ಣದಾದಂತಹ ಕೊಡುಗೆಯಾಗಿದೆ. ಇಂತಹ ಒಂದು ಸಭೆ ಅವರ ಬಗ್ಗೆ ಸಂತಾಪ ಸೂಚನೆ ಮಾಡುವಂಥಾದ್ದು ಏನು ಇದೆ, ಇದು ನಿಜಕ್ಕೂ ಕೂಡ ಶ್ಲಾಘನೀಯವಾದದ್ದು. ಇನ್ನು ಶ್ರೀ ಎಲ್.ಜಿ. ಹಾವನೂರ್‌ರವರಿಗೆ ನಾವೆಲ್ಲರೂ ಕೂಡ ಶ್ರದ್ಧಾಂಜಲಿಯನ್ನು ಅರ್ಪಿಸಲೇಬೇಕಾಗಿರುವಂತದ್ದು ಅವರ ಜೊತೆಗೆ ನಾನೂ ಬಹಳ ವರ್ಷಗಳ ಕಾಲ ಕೆಲಸ ಮಾಡಿರುವಂಥವನು ಆಗಿದ್ದೇನೆ. ನಾನು ವಕೀಲನಾಗಿದ್ದಂತಹ ಸಂದರ್ಭದಲ್ಲಿ ಮುದ್ರಣಕ್ಕೆ ಕಳುಹಿಸಿಕೊಟ್ಟಂತಹ ಸಂದರ್ಭದಲ್ಲಿ ಸರ್ಕಾರಿ ಮುದ್ರಣಾಲಯದಲ್ಲಿಯೇ ಅವರು ರಾತ್ರಿ ಮಲಗಿ spelling ಗಳನ್ನು ತಿದ್ದುವಂತಹ ಕೆಲಸವನ್ನೂ ಮಾಡುತ್ತಿದ್ದರು. ಅವರು ಕೇವಲ LL.B. ಓದಿರುವಂತಹದ್ದು. LL.B. ಯನ್ನು ಓದಿದರೂ ಕೂಡ ಆ ಇಂಗ್ಲೀಷಿನ ಮೇಲೆ ಇದ್ದಂತಹ ಅವರ ಪ್ರಭುತ್ವ ಇವತ್ತಿಗೂ ಕೂಡ ಮೆಚ್ಚುವಂತಹದ್ದು. ಶ್ರೀ ಎಲ್.ಜಿ. ಹಾವನೂರ್‌ರವರು ಹಾವನೂರು ವರದಿಯಲ್ಲಿ ಏನೆಲ್ಲಾ ಶಿಫಾರಸ್ಸುಗಳನ್ನು ಮಾಡಿದರು ಎಂಬುದಕ್ಕಿಂತ ಹೆಚ್ಚಿಗೆ ಅವರ ಪೀಠಿಕೆ, ಪ್ರಸ್ತಾವ ಏನು ಇದೆ, preamble ಏನು ಬರೆದಿದ್ದಾರೆ ಅದು ಒಬ್ಬ ಸಮಾಜ ಶಾಸ್ತ್ರಜ್ಞ ಬರೆಯುವಂತಹ ರೀತಿಯಲ್ಲಿ ಇರುವಂತಹದ್ದು. ಆದರೆ ಈ ದೇಶ ವೈರುದ್ಯಗಳ ಕಾಶಿಯ ಬಗ್ಗೆ ನಾವು ಮಾತನಾಡಿದಂತೆ ಯಾರು ಯಾರ ಪರವಾಗಿ ನಿಂತು ಹೋರಾಟ ಮಾಡುತ್ತಾರೆ, ಅವರನ್ನು ನಾವು ಮರೆಯುವ ಅಥವಾ ಸೋಲಿಸುವ ಅವರಿಗೆ ಸಲ್ಲಿಸುವಂತಹ ಗೌರವವನ್ನು ನಾವು ಸಲ್ಲಿಸುವುದಿಲ್ಲ. 1961ರಲ್ಲಿ ನಮ್ಮ ಜಿಲ್ಲೆಯವರೇ ಆಗಿದ್ದಂತಹ ಶ್ರೀ ಜಯಪ್ರಕಾಶ್ ನಾರಾಯಣ್ ಮತ್ತು ಬಲವಂತರಾಯ್ ಮೆಹ್ತಾರವರ ಜೊತೆಗೆ ಒಂಭತ್ತು ವರ್ಷಗಳ ಕಾಲ ಅಮೇರಿಕಾದಲ್ಲಿ ಎಂ.ಎಸ್.ಸಿ. ಪಿ.ಹೆಚ್.ಡಿ. ಮಾಡಿ ಅರಿಗಾಂವ್‌ನಿಂದ ಬೀಜಗಳನ್ನು ತಂದು ನಮ್ಮಲ್ಲಿ ಬಳ್ಳಾರಿ ಜಾಲಿ ಎಂದು ಪ್ರಖ್ಯಾತ ಆಗಿರುವಂತಹ ಬಡವರ ಉರುವಲು ಮಾಡಿದ್ದಾರೆ. ಅಂತಹ ಒಬ್ಬ ಡಾಕ್ಟರ್ ಆರ್. ನಾಗನಗೌಡರ್ 1961ರಲ್ಲಿ ಹಿಂದುಳಿದ ವರ್ಗದ ____ ಜನಾಂಗದವರಿಗೆ ಸಂಬಂಧಪಟ್ಟಂತೆ ಒಂದು ಚಿಕ್ಕ ವರದಿಯನ್ನು ಕೊಟ್ಟರು. ಆ ವರದಿ ಬಹಳ ವಿವಾದಕ್ಕೆ ಎಡೆ ಮಾಡಿ ಕೊಟ್ಟಿತು. ಅಂತಹ ಸಂದರ್ಭದಲ್ಲಿ ಮೇಲು ಜಾತಿಗೆ ಸೇರಿದಂತಹ ಅವರನ್ನು ಸೋಲಿಸಬೇಕು ಎಂದು ನಿರ್ಧಾರ ಮಾಡಿ ತೀರಾ

ಹಿಂದುಳಿದ ವರ್ಗಕ್ಕೆ ಸೇರಿದಂತಹ ಒಬ್ಬ ಮಹಿಳೆಯನ್ನು ಆಯ್ಕೆ ಮಾಡಿ ಅವರ ಮೂಲಕ ಡಾಕ್ಟರ್ ಆರ್. ನಾಗನಗೌಡರ್‌ರವರನ್ನು ಸೋಲಿಸುವ ಮೂಲಕ ಅವರನ್ನು ರಾಜಕೀಯ ಜೀವನದಿಂದಲೇ ಹೊರಗಡೆ ಹೋಗುವಂತಹ ವ್ಯವಸ್ಥೆಯನ್ನು ಮಾಡಿದರು. ನಮ್ಮ ಜನರು ಹೇಗೆ ಎಂದರೆ ಯಾರ ಪರವಾಗಿ ನಿಂತು ಹೋರಾಟ ಮಾಡುತ್ತೇವೆ ಅವರು ಮೇಲ್ಜಾತಿಯ ಅಥವಾ ಸಾಮಾಜಿಕ ಸಂಘರ್ಷಗಳ ಒಳ ಧ್ವನಿಗಳನ್ನು ಒಳಹುನ್ನಾರಗಳನ್ನು ಅರ್ಥಮಾಡಿಕೊಳ್ಳ ಲಾರದಷ್ಟು ನಾವು ಅವಘ್ನೆಗೆ ಒಳಗಾಗಿರುತ್ತೇವೆ. ಆ ಕಾರಣಕ್ಕಾಗಿಯೇ ಸುಧಾರಣೆ ಎನ್ನುವಂತಹದ್ದು ಭಾರತ ದೇಶದಲ್ಲಿ ತರುವಂತಹದ್ದು ಬಹಳ ಕಷ್ಟವಾದ ಕೆಲಸವಾಗಿದೆ. ಅದಕ್ಕೇ ಹತ್ತಾರು ವರ್ಷಗಳು, ಸಾವಿರಾರು ವರ್ಷಗಳಿಂದಲೂ ಕೂಡ ನಿರಂತರವಾಗಿ ಹೋರಾಟ ಮಾಡಿದರೂ ಕೂಡ ಪರಿಣಾಮಕಾರಿಯಾಗಿ ಇರುವುದಿಲ್ಲ. ಅದೇ ಒಂದು ಗತಿ ಶ್ರೀ ಎಲ್.ಜಿ. ಹಾವನೂರ್‌ರವರಿಗೆ ಬಂತು ಎನ್ನುವುದನ್ನು ನಾವು ಮರೆಯಬಾರದು. ಇಲ್ಲಿ ಬರೀ ಸೋಲುವುದು ಅಲ್ಲ. ಅವರನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಇವತ್ತು ನಾಯ್ಕ ಜನಾಂಗದವರು ಎಂದು ನಾವು ಏನು ಅಭಿಮಾನವನ್ನು ಪಡುತ್ತೇವೆ, ಅಂತಹ ಬಹು ಸಂಖ್ಯಾತರು ಇರುವಂತಹ ಚಿತ್ರದುರ್ಗ ಜಿಲ್ಲೆಯಲ್ಲಿ ಅವರು ಲೋಕಸಭೆಯ ಚುನಾವಣೆಗೆ ಸ್ಪರ್ಧೆ ಮಾಡಿದರೆ, ಅವರ ಠೇವಣಿಯನ್ನೂ ಕೂಡ ನಾವು ಕಳೆದೆವು. ನಾವು ಬಹಳ ಜನರು ಮಾತನಾಡುತ್ತಿದ್ದೇವೆ. ನಮ್ಮ ನಮ್ಮ ಯೋಗ್ಯತೆ ಪರೀಕ್ಷೆ ಆಗಬೇಕಾದರೆ ಅದು ಜನತಾ ನ್ಯಾಯಾಲಯದಲ್ಲಿ ಪರೀಕ್ಷೆ ಆಗಿಬಿಡಲಿ ಎಂದು ಹೇಳುತ್ತೇವೆ. ಜನತಾ ನ್ಯಾಯಾಲಯ ಅನೇಕ ಬಾರಿ ಸಮೂಹ ಸನ್ನಿಗೆ ಒಳಗಾಗಿರುತ್ತದೆ. ಅದು ಬೇರೆ ಬೇರೆ ಪ್ರಭಾವಗಳಿಗೆ ಒಳಗಾಗಿರುತ್ತದೆ. ಅದು ಅನೇಕ ಬಾರಿ ತನ್ನ ವೈಚಾರಿಕತೆಗಳನ್ನು ತನ್ನದೇ ಆದ ಗತಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳಲು ಆಗದೇ ಇರುವಂತಹ ಸ್ಥಿತಿಗೆ ತಲುಪುವುದರಿಂದ, ಶ್ರೀ ಎಲ್.ಜಿ. ಹಾವನೂರ್ ರವರು ಆ ರೀತಿಯ ಸೋಲನ್ನು ಅನುಭವಿಸಿದರು. ಆದರೆ ನಮ್ಮ ಜನರು ಮತ್ತೆ ಗೆದ್ದಾಗ ಅಥವಾ ಸತ್ತಾಗ ಅವರ ಬಗ್ಗೆ ನಾವು ಗುಣಗಾನ ಮಾಡುತ್ತೇವೆ. ನನಗೆ ಬಹಳ ಸಂತೋಷವೆಂದರೆ ಅವರು ಇಷ್ಟು ವೈಚಾರಿಕರಾಗಿದ್ದರೂ ಕೂಡ, ಅವರು ಸಮಾಜ ಶಾಸ್ತ್ರಜ್ಞರಾಗಿ ಕೆಲಸವನ್ನು ಮಾಡುತ್ತಿದ್ದರು. ಅವರು ಅಷ್ಟೇ ದೈವ ಭಕ್ತರಾಗಿದ್ದರು. 1952ರ ಸುಮಾರಿಗೆ ರಾಣೆಬೆನ್ನೂರಿಗೆ ವಕಾಲತ್ತನ್ನು ಮಾಡಲು ಬಂದಂತಹ ಸಂದರ್ಭದಲ್ಲಿ ಮಾನ್ಯ ಡಿ.ಆರ್.ಪಾಟೀಲ್ ಮತ್ತು ಮಾನ್ಯ ಶಿವಣ್ಣನವರಿಗೂ ಈ ವಿಷಯ

2.00 ಪಿಎಂ

ಗೊತ್ತಿರಬಹುದು. ಅಲ್ಲಿ ಅಜ್ಜಿಒಡೆಯರ ಮಠದವರದ್ದು ಒಂದು ಗುಂಪು, ಬಣಕಾರ್‌ರವರದ್ದು ಒಂದು ಗುಂಪು ಇರುತ್ತದೆ. ಅಜ್ಜಿ ಒಡೆಯರ್ ಮಠದವರು ನಾಯಕರ ಊರಿಗೆ ಶ್ರೀ ಎಲ್.ಜಿ. ಹಾವನೂರ್ ರವರನ್ನು ಕರೆದುಕೊಂಡು ಹೋಗಿ, ನಾನು ಇವರನ್ನು ನಿಲ್ಲಿಸಿದ್ದೇನೆ. ನಿಮ್ಮ ಜನರು, ಬಹಳ ಓದಿಕೊಂಡು ಬಂದಿದ್ದಾರೆ, ವಕೀಲರು; ಅವರಿಗೆ ನೀವು ಮತ ಕೊಡಬೇಕೆಂದು ಕೇಳಿದರೆ, ಆ ಓಣಿಯ ಯಜಮಾನತಿಯಾಗಿರುವಂತಹ ಗಂಗವ್ವ ಎನ್ನುವವರು, ಆಯಿತಪ್ಪ, ನೀವೆಲ್ಲರೂ ಹೇಳಿದ್ದೀರಿ, ನಮ್ಮ ಸಾಹುಕಾರರು ಬರಲಿ ಅವರನ್ನು ಕೇಳಿ ಓಟು ಕೊಡುತ್ತೇವೆಂದು ಹೇಳಿದರೆಂದರೆ, ಇದರ ಅರ್ಥವನ್ನು ನಾವೆಲ್ಲರೂ ಯೋಚನೆ ಮಾಡಬೇಕು. ನಮ್ಮ ಜನಾಂಗದವರು ಇವರು, ವಿದ್ಯಾವಂತರು, ಇವರನ್ನು ನಾವು ಗೆಲ್ಲಿಸುವುದರ ಮೂಲಕ ಒಂದು ಒಳ್ಳೆಯ ಪ್ರಾತಿನಿಧ್ಯವನ್ನು ಕೊಡುತ್ತೇವೆನ್ನುವುದಕ್ಕಿಂತ ಕೂಡ, ಬೇರೆ ಬೇರೆ ಪ್ರಭಾವಗಳು ಮತ್ತು ಒತ್ತಡಗಳ ಮೇಲೆ ಕೆಲಸಗಳನ್ನು ಮಾಡುತ್ತಾರೆಂದು ಹೇಳುವಂಥಾದ್ದು. 1952ರಲ್ಲಿ ಪ್ರಥಮ ಚುನಾವಣೆ ಬಂದಂತಹ ಸಂದರ್ಭದಲ್ಲಿ ಅವತ್ತಿನ ಅವಿಭಾಜ್ಯ ಅಂಗವಾಗಿದಂತಹ ಧಾರವಾಡ ಜಿಲ್ಲೆಯಲ್ಲಿ 16 ಸ್ಥಾನಗಳು ಇತ್ತು. ಅದರಲ್ಲಿ ಸಂವಿಧಾನದಲ್ಲಿ ಮೀಸಲು ಆಗಿರುವಂತಹ ಸ್ಥಾನಗಳು ಬಿಟ್ಟು ಉಳಿದ ಎಲ್ಲಾ ಸ್ಥಾನಗಳಿಗೆ ಬೇರೆ ಲಿಂಗಾಯಿತರಿಗೆ ಕಾಂಗ್ರೆಸ್ ಪಕ್ಷದಿಂದ ನಿಲ್ಲಿಸಿದರು. ಆ ಸಂದರ್ಭದಲ್ಲಿ ಅವರು ಹೊರಡಿಸಿದಂತಹ ಕರಪತ್ರವನ್ನು ನಾನು ನೋಡಿದ್ದೇನೆ. ನನಗೆ ತುಂಬಾ ಬೇಕಾಗಿದ್ದಂತಹ ಒಬ್ಬರು ರಾಜಾ ನಾಯಕ್ ಎಂಬ ಲಂಬಾಣಿ ಜನಾಂಗದ ಒಬ್ಬ ವಿದ್ಯಾವಂತ ಯುವಕನನ್ನು ಶ್ರೀ ಎಲ್.ಜಿ. ಹಾವನೂರ್‌ರವರು ಈ ರೀತಿಯ ಮೇಲ್ ಜಾತಿಯ ಪ್ರಭಾವಕ್ಕೆ ಒಳಗಾಗಿದಂತಹ ಕಾಂಗ್ರೆಸ್ ಪಕ್ಷಕ್ಕೆ ನಾನು ಪ್ರತಿ ಸವಾಲಾಗಿ 16 ಸ್ಥಾನಗಳನ್ನು ನೀಡಬಾರದು, ಹಿಂದುಳಿದ ಜನಾಂಗದವರಿಗೂ ಅವಕಾಶವನ್ನು ಕಲ್ಪಿಸಬೇಕೆನ್ನುವ ಕಾರಣಕ್ಕಾಗಿ ಕರಪತ್ರವನ್ನು ಪ್ರಕಟಣೆ ಮಾಡುವುದರ ಜೊತೆಗೆ ನಾವು ಸೋಲುತ್ತೇವೆ, ಆದರೆ ನಮ್ಮ ಹೋರಾಟ ಸಾಂಕೇತಿಕವಾದದ್ದು, ಅರ್ಥಗರ್ಭಿತವಾದದ್ದು, ಎನ್ನುವ ಮಾತನ್ನೂ ಆ ಕರಪತ್ರವನ್ನು ಪ್ರಕಟಣೆ ಮಾಡುತ್ತಾರೆ.

ಹಾಗೆಯೇ 1983–84ನೇ ಸಾಲಿನಲ್ಲಿ ನಾನು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ನಾಯಕ ಎಂದರೆ ಬೇಡ, ತಳವಾರ, ಪರಿವಾರ, ವಾಲ್ಮೀಕಿ ಇವೆಲ್ಲಾ ಸಮಾನವಾಗಿರತಕ್ಕಂಥ ಪದಗಳು ಎಂದು ಹೇಳಿ, ಅದಕ್ಕಾಗಿ ನನ್ನಿಂದ ಒಂದು ಪತ್ರವನ್ನು ಬರೆಸಿ, ಆ ಪತ್ರದ ಆಧಾರದ ಮೇಲೆ Supreme Courtನಲ್ಲಿ

ಹೋರಾಟವನ್ನು ಮಾಡಿ, ಇವತ್ತು ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದ ಜನಾಂಗಕ್ಕೆ 14 ಸ್ಥಾನಗಳ ಮೀಸಲಾತಿ ಸಿಗಬೇಕಾಗಿದ್ದರೆ, ಅದಕ್ಕೆ ಕಾರಣ ಅವತ್ತಿನ ದಿವಸ ಹೋರಾಟ ಮಾಡಿ ಅವುಗಳನ್ನೆಲ್ಲಾ ಸಮಾನ ಪದಗಳು ಎಂದು ಮಾಡಿದಂಥವರು ಎಲ್.ಜಿ.ಹಾವನೂರ್‌ರವರು. ಆಗ ಸನ್ಮಾನ್ಯ ದೇವೇಗೌಡರು ಪಾರ್ಲಿಮೆಂಟಿನ ಸದಸ್ಯರಾಗಿದ್ದರು. ಕೇವಲ 4 ತಿಂಗಳ ಅವಧಿಗೆ ಮಾನ್ಯ ಚಂದ್ರಶೇಖರ್‌ರವರು ಪ್ರಧಾನ ಮಂತ್ರಿಗಳಾಗಿದ್ದಾಗ ಆಜ್ಞೆಯನ್ನು ಮಾಡಿದರು. ಅದಕ್ಕೆ ಒತ್ತಾಸೆಯಾಗಿ ನಿಂತಂಥವರು ಸನ್ಮಾನ್ಯ ಎಲ್.ಜಿ.ಹಾವನೂರ್‌ರವರು. ಇವತ್ತು ನಾವು ಅವರನ್ನು ನೆನೆಯಬೇಕಾಗಿದೆ. ಮೀಸಲಾತಿ ಅನ್ನತಕ್ಕಂಥಾದ್ದಾಗಲೀ, ಹೋರಾಟ ಎನ್ನತಕ್ಕಂಥ ಪರಿಕಲ್ಪನೆಯಾಗಲೀ, ಸಾಮಾಜಿಕ ನ್ಯಾಯದ ಪರಿಕಲ್ಪನೆಯಾಗಲೀ ಒಂದೇ ದಿವಸದಲ್ಲಿ ಆಗಿರತಕ್ಕಂಥಾದ್ದಲ್ಲ. ಅದಕ್ಕೆ ನಿರಂತರವಾದಂಥ ಹೋರಾಟ, ಅದಕ್ಕೆ ಬೇಕಾಗಿರತಕ್ಕಂಥ ಸಾಮಾಜಿಕ ಸ್ಥಿತಿಗತಿಗಳನ್ನು ತಯಾರು ಮಾಡತಕ್ಕಂಥಾದ್ದು, ಆ ವಿಷಯಗಳನ್ನು ಪ್ರಸ್ತಾಪ ಮಾಡುವುದು ಬಹಳ ಮುಖ್ಯವಾಗಿರುವುದರಿಂದ ಎಲ್.ಜಿ. ಹಾವನೂರ್‌ರವರು ನಮಗೆ ಬಹಳ ಪ್ರಸ್ತುತರು ಮತ್ತು ಅಗತ್ಯವಾಗಿರತಕ್ಕಂಥವರು. ಮುಂದಿನ ದಿನಮಾನಗಳಲ್ಲಿಯೂ ಕೂಡ ಇಲ್ಲಿಯವರೆಗೆ ಬಂದಿರತಕ್ಕಂಥ ಎಲ್ಲಾ ಹಿಂದುಳಿದ ಜನಾಂಗದ ಮೀಸಲಾತಿಯ ವಿಚಾರದಲ್ಲಿ ಯಾರ್‍ಯಾರು ವರದಿಗಳನ್ನು ಕೊಟ್ಟಿದ್ದಾರೆ, ಅವುಗಳಲ್ಲಿ ಅತ್ಯುತ್ತಮವಾದಂಥ ವರದಿ ಎಂದರೆ ಎಲ್.ಜಿ.ಹಾವನೂರ್‌ರವರ ವರದಿ ಎಂಬುದನ್ನು ಮರೆಯಬಾರದು. ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಧರಂಸಿಂಗ್‌ರವರು ಪ್ರಸ್ತಾಪ ಮಾಡುತ್ತಾ, ದೇವರಾಜ ಅರಸುರವರು ಅದಕ್ಕೆ ಬೇಕಾಗಿರತಕ್ಕಂಥ ಅವಕಾಶವನ್ನು ಕಲ್ಪಿಸಿಕೊಟ್ಟರು, ಹಾಗೆಯೇ ಕಾನೂನು, ಸಮಾಜ ಸೇವೆಗಳು, ಸಮಾಜ ಕಲ್ಯಾಣ ಮೊದಲಾದಂಥ ಖಾತೆಗಳ ಮಂತ್ರಿಗಳಾಗಿದ್ದರು; ರಾಜ್ಯ ಸಭಾ ಸದಸ್ಯರಾಗಿದ್ದರು ಎಂದು ಹೇಳಿದರು. ದಕ್ಷಿಣ ಆಫ್ರಿಕಾ ದೇಶದಲ್ಲಿ ಅಸ್ಪೃಶ್ಯತೆಗೆ ಸಂಬಂಧಪಟ್ಟಂಥ ವಿಚಾರ ಬಂದಾಗ, ಸಂವಿಧಾನವನ್ನು ರಚನೆ ಮಾಡಲು ಹೋರಾಡಿದಂಥ ಅತ್ಯುನ್ನತವಾದಂಥ ಒಬ್ಬ ಕಾನೂನು ತಜ್ಞನಾಗಿ ಕೆಲಸ ಮಾಡುವಂಥ ಅವಕಾಶ ಅವರಿಗೆ ಲಭ್ಯವಾಗಿತ್ತು. ಇವತ್ತು ನಾವು ಯಾರನ್ನು ಅಂತ್ಯಜರು ಎಂದು ಕರೆಯುತ್ತೇವೆ, ಯಾರನ್ನು ನಾವು ಪಂಚಮರು ಎಂದು ಕರೆಯುತ್ತೇವೆ, ಅವರ ಒಗ್ಗಟ್ಟಿನಲ್ಲಿಯೂ ಕೂಡ ತಾರತಮ್ಯದ ಮನೋಭಾವನೆಯನ್ನು ಸೃಷ್ಟಿ ಮಾಡಿರುವಂಥ ಸಾಮಾಜಿಕ ವ್ಯವಸ್ಥೆ, ಬಹಳ ವರ್ಷಗಳ ಕಾಲ ಬಿಳಿಯರು ಅಧಿಪತ್ಯವನ್ನು ಮಾಡಲಿಕ್ಕೆ, ಅಲ್ಲಿರುವಂಥ ಬುಡಕಟ್ಟುಗಳಲ್ಲಿ ಭಿನ್ನಾಭಿಪ್ರಾಯವನ್ನು

ತರುವುದರ ಮೂಲಕ, ಆ ಬುಡಕಟ್ಟುಗಳವರು ವರ್ಣದಿಂದ ಕರಿಯರಾಗಿದ್ದರೂ ಕೂಡ ಅವರೂ ಒಂದು ಬುಡಕಟ್ಟಿಗೆ ಸೇರಿದಂಥ ಜನಾಂಗದವರಾಗಿದ್ದರೂ ಕೂಡ, ಒಗ್ಗಟ್ಟಿನಿಂದ ಬದುಕು ಮಾಡಲಿಕ್ಕೆ ಸಾಧ್ಯವಿಲ್ಲದಂಥಾದ್ದು ಆಗಿ, ಆ ಬೋಯರ್ ಯುದ್ಧದಲ್ಲಿ ಗಾಂಧೀಜಿಯಂಥವರೂ ಕೂಡ ಡಚ್ಚರ ವಿರುದ್ಧವಾಗಿ ಇಂಗ್ಲೀಷರ ಪರವಾಗಿ ನಿಲ್ಲುವಂಥ ಒಂದು ಸಂಘರ್ಷಗಳು ಇರುವುದನ್ನು ನಾನು ಇತಿಹಾಸದಲ್ಲಿ ಓದಿದ್ದೇನೆ. ಆ ಕಾರಣಕ್ಕಾಗಿಯೇ ಒಬ್ಬ ವ್ಯಕ್ತಿಯ ಹಿನ್ನಲೆಯ ಚರಿತ್ರೆಯಲ್ಲಿ, ಆತ ಸಮಾಜಕ್ಕಾಗಿ ಕೊಟ್ಟಿರತಕ್ಕಂಥ ಕೊಡುಗೆಯನ್ನು, ನಾವು ಆತನನ್ನು ಗುಣಗಾನ ಮಾಡಲಿಕ್ಕಾಗಿರತಕ್ಕಂಥ ಆತನ ವಿಚಾರಗಳು ಏನಿವೆ, ಅವುಗಳನ್ನು ನಾವು ಹೆಚ್ಚು ಪ್ರಸ್ತಾಪ ಮಾಡಬೇಕಾಗುತ್ತದೆ. ಆ ಕಾರಣಕ್ಕಾಗಿಯೇ, ಬೆಂಗಳೂರು ವಿಶ್ವವಿದ್ಯಾಲಯದಲ್ಲಾಗಲೀ ಅಥವಾ ಈಗಾಗಲೇ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಬೇರೆಯವರು ಸಲಹೆ ಕೊಟ್ಟಂತೆ ಸಾಮಾಜಿಕ ಬದಲಾವಣೆಗೆ ಸಂಬಂಧಪಟ್ಟ ಒಂದು ಸಂಸ್ಥೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಪರಿಶೀಲಿಸಿ, ರಾಜ್ಯ ಸರ್ಕಾರದಿಂದ ಅಂತಹ ಒಂದು ಸಂಸ್ಥೆಯನ್ನು ಕಟ್ಟುವುದೋ ಅಥವಾ ಅವರ ಹೆಸರಿನಲ್ಲಿ ಒಂದು ಪೀಠವನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವಂಥಾದ್ದನ್ನೋ ಮಾಡಬೇಕು. ಕಾನೂನು ಅನ್ನುವಂಥಾದ್ದು ಕೇವಲ ಪುಸ್ತಕಗಳಲ್ಲಿ ಇರತಕ್ಕಂಥಾದ್ದು ಅಲ್ಲ. ಕಾನೂನು ಜನರ ಭಾವನೆಗಳಿಗೆ ಸ್ಪಂದಿಸುವಂಥಾದ್ದು ಆಗಬೇಕು. ಅದು ಒಂದು ಸಾಮಾನ್ಯ ಜ್ಞಾನ. ಆ ಸಾಮಾನ್ಯ ಜ್ಞಾನದಿಂದ ಆ ಸಮಾಜದ ಬಂಧುರತೆಯನ್ನು, ಅದರ ಒಗ್ಗಟ್ಟನ್ನು, ಸೌಹಾರ್ದತೆಯನ್ನು ಕಾಪಾಡಿಕೊಂಡು ಹೋಗಬೇಕು ಎನ್ನುವಂಥ ಮಾತನ್ನು ಅವರು ಹೇಳುತ್ತಿದ್ದರು. ಅವರು ಎಂದೂ ಕೂಡ ಮೇಲ್ಜಾತಿಗೆ ವಿರೋಧವಾಗಿರತಕ್ಕಂಥವರು ಆಗಿರಲಿಲ್ಲ. ಸೀನಿಯರ್ ಮಳೀಮಠ್ ರವರ ಹತ್ತಿರ ನಾನು ಜೂನಿಯರ್ ಆಗಿ ಕಲಿತಿದ್ದೇನೆ ಎಂದು ಅವರು ಹೇಳುತ್ತಿದ್ದರು. ಅವರ ಹತ್ತಿರ ಕೆಲಸ ಮಾಡಿರತಕ್ಕಂಥದ್ದೂ ಉಂಟು. ಅವರೂ ಕೂಡ ಅನೇಕ ಸಂದರ್ಭಗಳಲ್ಲಿ ಲಿಂಗಾಯಿತರಲ್ಲಿ 72 ಉಪಜಾತಿಗಳಿವೆ ಎನ್ನುವ ವರದಿಯನ್ನು ಹೇಳಿದಾಗ ದೇವರಾಜ ಅರಸುರವರು, ನನಗೆ ಒಂದು ಆಯುಧ ಸಿಕ್ಕಿತು ಎಂದು ಹೇಳಿದರಂತೆ. ಇದರಲ್ಲಿ ಎಷ್ಟು ಒಳಜಾತಿಗಳಿವೆ ಎನ್ನುವುದು ನನಗೆ ಗೊತ್ತಿಲ್ಲ. ಆದ್ದರಿಂದ ಲಿಂಗಾಯಿತರಲ್ಲಿ ಎಷ್ಟು ಒಳಜಾತಿಗಳಿವೆ ಎನ್ನುವುದನ್ನು ನಿಮ್ಮ ವರದಿಯ ಮೂಲಕವಾಗಿ ಕೊಟ್ಟರೆ ನನಗೆ ಏನಾದರೂ ಕೆಲಸ ಮಾಡಲಿಕ್ಕೆ ಸಾಧ್ಯತೆಯಾಗುತ್ತದೆ ಎನ್ನುವಂಥ ರೀತಿಯಲ್ಲಿ ದೇವರಾಜ ಅರಸುರವರು ಅವತ್ತು ಪ್ರತಿಕ್ರಿಯೆ ಮಾಡಿದರು ಎನ್ನುವಂಥ ಮಾತನ್ನು

ಹೇಳಿದರು. ಅವರ ಸಮಾಜ ತಿಳುವಳಿಕೆ ಮತ್ತು ಜ್ಞಾನ ಹೇಗಿದೆ ಎಂದರೆ ಅವರ ಮನೆದೇವರು ಹೊನ್ನತ್ತಮ್ಮ. ಅವರ ಮಗಳು M.A. (English) ಓದಿದ್ದಾರೆ. ಒಂದು ಸಲ ನಾನು ಮತ್ತು ಅವರು ರಾಣೆಬೆನ್ನೂರಿನ ಆಚೆಗಿರುವಂಥ ಊರಿನ ಹೊರಗಡೆ ಇರುವಂಥ, ಅತ್ಯಂತ ಗಲೀಜಾಗಿರತಕ್ಕಂಥ ಒಂದು ಕರೆ ಇದ್ದು, ಅಲ್ಲಿ ಎಲ್ಲಾ ತರಹದ ಹೊಲಸನ್ನು ಮಾಡುತ್ತಾರೆ. ಎಮ್ಮೆ ತೊಳೆಯತಕ್ಕಂಥ ಜಾಗವೂ ಅದೇ, ಬಟ್ಟೆ ತೊಳೆಯತಕ್ಕಂಥ ಜಾಗವೂ ಅದೇ, ಜನರು ಮೈ ತೊಳೆಯತಕ್ಕಂಥ, ಈಜಾಡುವಂಥ ಜಾಗವೂ ಕೂಡ ಅದೇ. ನಾಲ್ಕಾರು ಬತ್ತಲೆ ಹುಡುಗರು ಆ ಕೆರೆಯ ಏರಿಯ ಮೇಲಿನಿಂದ ಹಾರಿ ಆ ಕೆರೆಯಲ್ಲಿ ಈಜಾಡುತ್ತಿದ್ದರು. ಆಗ ಹಾವನೂರ್‌ರವರು ಅಂದರು, ತಂಗೀ ಅವನೇ ನೋಡು ಹಾವನೂರ್ ಎಂದರು. ಆಕೆ ಬೆಂಗಳೂರಿನಲ್ಲಿ ಓದಿದವರಾಗಿದ್ದರು. ಹಾಗಾಗಿ ಆ ಹುಡುಗಿ, ಅವರ ಹೆಸರೂ ಹಾವನೂರ್ ಏನಪ್ಪಾ ಎಂದರು. ಆಗ ಹಾವನೂರ್‌ರವರು, ಅವರು ಹಾವನೂರ್ ಅಲ್ಲ, ನಾನೂ ಅದೇ ರೀತಿ ಇದ್ದೆ, ಇದೇ ಕೆರೆಯಲ್ಲಿ ಈಜಾಡಿದ್ದೆ, ನಾನು ಈ ಮಟ್ಟಕ್ಕೆ ಬರಬೇಕಾಗಿದ್ದರೆ, ಎಷ್ಟರ ಮಟ್ಟಿನ ಸಮಾಜ ಸಂಘರ್ಷಗಳಲ್ಲಿ ಮತ್ತು ಸಮಾಜದ ಸ್ಥರಗಳಲ್ಲಿ ಮೀಸಲಾತಿ ಮತ್ತು ನ್ಯಾಯವನ್ನು ಪಡೆಯಲಿಕ್ಕೆ ಹೋರಾಟ ಮಾಡಿದ್ದೇವೆ ಎನ್ನುವುದನ್ನು ನೀನು ಯೋಚನೆ ಮಾಡಬೇಕು ಎಂದು ಹೇಳಿ, ಅಷ್ಟು ಸಾಂಕೇತಿಕವಾಗಿ ಮಾತನಾಡತಕ್ಕಂತವ ರಾಗಿದ್ದರು. ಹಾಗೆಯೇ ಅನೇಕರು ಇಲ್ಲಿ ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕರೀಂ ಖಾನ್‌ರವರ ಬಗ್ಗೆ ಎಲ್ಲರೂ ಹೇಳಿರತಕ್ಕಂಥ ಮಾತಿಗೆ ನಾನೂ ಕೂಡ ಧ್ವನಿ ಕೊಡುತ್ತಿದ್ದೇನೆ.

ಇನ್ನು, ಶ್ರೀಮತಿ ಮಹದೇವಿ ತಾಯಿಯವರು ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರದ ದೊಡ್ಡಮನೆಯಿಂದ ಬಂದವರು. ಅವರು ಬಾಲವಿಧವೆ. ಬಾಲವಿಧವೆಯರ ಸಂಕಷ್ಟ ಎಷ್ಟಿದೆ ಎನ್ನುವುದು ನಿಮಗೆಲ್ಲಾ ಗೊತ್ತಿರತಕ್ಕಂಥಾದ್ದು. ಅವರನ್ನು ವಿನೋಬಾಜಿ ಆಶ್ರಮಕ್ಕೆ ಕಳುಹಿಸಿ ಕೊಡುತ್ತಾರೆ. ಅವರು ಗಾಂಧಿವಾದಿಗಳಾಗಿದ್ದರು. ಕರನಿರಾಕರಣೆಯ ವೀರಕಥೆ ಎಂದು ಮಾಡಿದಂಥ ಸಂದರ್ಭದಲ್ಲಿ ಅವರ ಇಡೀ ಆಸ್ತಿಯನ್ನು ಮಾರಾಟ ಮಾಡಿರತಕ್ಕಂಥಾದ್ದು ಗೊತ್ತಿದೆ. ಅವರು ಅಲ್ಲಿದ್ದಾಗ, ನಮ್ಮ ಹಿಂದಿನ ಮುಖ್ಯಮಂತ್ರಿಗಳಾಗಿದ್ದಂಥ, ದಿವಂಗತ ರಾಮಕೃಷ್ಣ ಹೆಗಡೆಯವರನ್ನು ಪವನಾರ್ ಆಶ್ರಮಕ್ಕೆ ನಾಗಪುರಕ್ಕೆ ಕರೆಸುತ್ತಾರೆ. ಆ ಆಶ್ರಮದಲ್ಲಿ ಅವರು ಕೆಲಸವನ್ನು ಮಾಡುತ್ತಾರೆ. ಹಾಗೆ ಕೆಲಸವನ್ನು ಮಾಡುವಂಥ ಸಂದರ್ಭದಲ್ಲಿ ವಿನೋಬಾಜಿಯವರು ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಆ ಊರಿನ ಪಕ್ಕದಲ್ಲಿರುವಂಥ ಗಲೀಜು ಅಂದರೆ ಅಮೇಧ್ಯ,

ಮಲಮೂತ್ರ ಇವುಗಳನ್ನು ಝಾಡಮಾಲಿಯಾಗಿ ಸ್ವಚ್ಛ ಮಾಡುವಂಥ ಕೆಲಸವನ್ನು ಅವರಿಗೆ ಕೊಡುತ್ತಾರೆ. ರಾಮಕೃಷ್ಣ ಹೆಗಡೆಯವರು ಅದನ್ನು ತಮ್ಮ ದಿನಚರಿಯಲ್ಲಿ ಬರೆಯುತ್ತಾರೆ, ಅದನ್ನು ನಾನು ಓದಿದ್ದೇನೆ. ಅದನ್ನು ನಾನು ನನ್ನ ಲೇಖನದಲ್ಲಿ ಬರೆದಿದ್ದೇನೆ ಕೂಡ. ಆ ಸಂದರ್ಭದಲ್ಲಿ ಅವರು ಹೇಳುತ್ತಾರೆ, ಪ್ರಾಯಶಃ ಇಂಥ ಅಮೇಧ್ಯವನ್ನು, ಮಲಮೂತ್ರವನ್ನು ತೆಗೆದು ಹಾಕುವಂಥ ಕೆಲಸವನ್ನು ವಿನೋಬಾಜಿಯವರು ನನಗೆ ಕೊಡುವುದರ ಮೂಲಕವಾಗಿ, ನನ್ನ ಜಾತಿಯ ಬ್ರಾಹ್ಮಣದ ಅಹಂಕಾರವನ್ನು ತೆಗೆಯಲಿಕ್ಕಾಗಿಯೇ ನನಗೆ ಇಂಥ ಕೆಲಸವನ್ನು ಕೊಟ್ಟಿದ್ದಾರೆ ಎಂದು ಅವರು ಭಾವಿಸಿಕೊಳ್ಳುತ್ತಾರೆ. ಮಹದೇವಿ ಅಕ್ಕ ಅಲ್ಲಿ ಇದ್ದಾಗ ಪರಿಶಿಷ್ಟ ಜಾತಿಯ ಒಂದು ಅನಾಥ ಹೆಣ್ಣು ಮಗುವನ್ನು ಸಾಕುತ್ತಾರೆ. ಈಗ ಆ ಮಗು ದೊಡ್ಡದಾಗಿ, ಜಿ.ಎಸ್‌ಯುನಲ್ಲಿ ವಿದ್ಯಾವಂತಳಾಗಿ ಒಬ್ಬ ಉನ್ನತ ಅಧಿಕಾರಿಯನ್ನು ಮದುವೆಯಾಗಿ ದೆಹಲಿಯಲ್ಲಿ ಇದ್ದಾಳೆ. ಒಂದು ಸಲ, ಮಹದೇವಿಯವರನ್ನು ಮನೆಗೆ ಬರಬೇಕು ಎಂದು ದೊಡ್ಡಮನೆಯವರು ಒಂದು ಪತ್ರ ಬರೆಯುತ್ತಾರೆ. ಆಗ ಆಕೆ ಬರೆದಿರತಕ್ಕಂಥ ಪತ್ರವನ್ನು ನಾನು ಓದಿದ್ದೇನೆ. ಆ ಪತ್ರದಲ್ಲಿ ಅವರು ಹೇಳುತ್ತಾರೆ, ನಾನು ಪರಿಶಿಷ್ಟ ಜಾತಿಗೆ ಸೇರಿದಂಥ ಒಂದು ಅನಾಥ ಮಗುವಿಗೆ ತಾಯಿಯಾಗಿದ್ದೇನೆ. ಆ ಮಗುವನ್ನು ಸಾಕಿದ್ದೇನೆ. ನೀವು ಸಂಪ್ರಾಯಸ್ಥರು, ನಾನು ಆ ಮನೆಗೆ ಬಂದಾಗ, ನನ್ನನ್ನು ನೀವು ಹೇಗೆ ನೋಡಿಕೊಳ್ಳುತ್ತಿದ್ದೀರಿ. ನನಗೆ ಮನೆಯಲ್ಲಿ ಯಾವ ಸ್ವಾತಂತ್ರ್ಯವನ್ನು ಕೊಡುತ್ತೀರಿ, ಅದೇ ಸ್ವಾತಂತ್ರ್ಯವನ್ನು ನನ್ನ ಮಗಳಾಗಿರತಕ್ಕಂಥ ಈ ಪರಿಶಿಷ್ಟ ಜಾತಿಯ ಆ ಹುಡುಗಿಗೂ ಕೊಡುವುದಾದರೆ ನಾನು ಮನೆಗೆ ಬರುತ್ತೇನೆ, ಇಲ್ಲದಿದ್ದರೆ ನಾನು ತೌರುಮನೆಗೆ ಬರುವುದಿಲ್ಲ ಎಂದು ಪತ್ರ ಬರೆಯುತ್ತಾರೆ. ಈ ರೀತಿಯಾಗಿರತಕ್ಕಂಥ, ತಾವು ನಂಬಿದ ನಂಬಿಕೆಗಳಿಗೆ ಬದ್ಧರಾಗಿರತಕ್ಕಂಥ ಜನ ಅವರು. ಇವರ ಜೊತೆಗೆ ಇನ್ನೂ ಅನೇಕ ಶಾಸಕ ಮಿತ್ರರು ನಿಧನ ಹೊಂದಿದ್ದಾರೆ. ಒಂದಲ್ಲ ಒಂದು ದಿವಸ ನಾವೆಲ್ಲರೂ ಸಾಯಲೇಬೇಕಾಗುತ್ತದೆ. ಆದರೆ ಅವರು ಮಾಡಿದಂಥ, ಅವರು ಬಿಟ್ಟು ಹೋದಂಥ ಹೆಜ್ಜೆ ಗುರುತುಗಳನ್ನು ನೆನೆಸುವುದರ ಮೂಲಕವಾಗಿ ನಾವು ಅವರಿಗೆ ಈ ಒಂದು ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗುತ್ತದೆ. ಆದ್ದರಿಂದ ಸನ್ಮಾನ್ಯ ಸಭಾಧ್ಯಕ್ಷರು ತಂದಿರತಕ್ಕಂಥ ಈ ಸಂತಾಪ ಸೂಚನಾ ನಿರ್ಣಯಕ್ಕೆ ನಾನು ನನ್ನ ಸಹಮತಿಯನ್ನು ವ್ಯಕ್ತಮಾಡುತ್ತಾ ನನಗೆ ಕೊಟ್ಟ ಅವಕಾಶಕ್ಕಾಗಿ ನಿಮಗೆ ವಂದನೆಗಳನ್ನರ್ಪಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈಗ ಸಭೆಯನ್ನು ಮೂರೂವರೆ ಗಂಟೆಗೆ ಸೇರುವಂತೆ....

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ: ಮಹಾಜನ್ ವರದಿ ಅಂತಿಮ ಎಂಬ ಬಗ್ಗೆ ನಿರ್ಣಯ ಮಂಡಿಸುವ ಬಗ್ಗೆ ಹಾಗೂ ಹಕ್ಕುಚ್ಯುತಿ ನಿರ್ಣಯದ ಬಗ್ಗೆ.

(ಅಡಚಣೆ)

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಪ್ರಿವಿಲೇಜ್ ಮೋಷನ್ ತಂದಿದ್ದೇವೆ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ತಾವು ಮೊದಲು ಹಕ್ಕುಚ್ಯುತಿ ನಿರ್ಣಯವನ್ನು ತೆಗೆದುಕೊಳ್ಳಬೇಕು.

ಶ್ರೀ ಎನ್. ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು): ಈ ಅಧಿವೇಶನ ನಡೆಯುತ್ತಿದೆ. ಇದು ತನ್ನದೇ ರೀತಿಯಲ್ಲಿ ಬಹಳ ಪ್ರಾಮುಖ್ಯತೆ ಆಗಿದೆ. ಇವತ್ತು ನಾವು ಯಾರ ಮೇಲೆ ಆರೋಪ ಮಾಡುವ ರೀತಿಯಲ್ಲಿಲ್ಲ. ಇವೊತ್ತು ಈಗಾಗಲೇ ಮಹಾರಾಷ್ಟ್ರ ಏಕೀಕರಣ ಸಮಿತಿಯವರ ಮಹಾಮೇಳ ನಡೆಯುತ್ತಿದೆ. ಮಹಾರಾಷ್ಟ್ರದ ಉಪ ಮುಖ್ಯಮಂತ್ರಿಗಳು ಸದರಿ ಮಹಾಮೇಳಕ್ಕೆ ಬಂದು ಉದ್ದೇಶಿಸಿ ಭಾಷಣ ಮಾತನಾಡುತ್ತಿದ್ದಾರೆ. ಇಂಥ ಒಂದು ಸಂದರ್ಭದಲ್ಲಿ ತಮಗೆ ಗೊತ್ತಿರಬಹುದು, ಬೆಳಗಾವಿ Corporation ನಲ್ಲಿ ಒಂದು ನಿರ್ಣಯವಾಗಿದೆ. ಈ ನಮ್ಮ Belgaum ನಗರ ಹಾಗೂ ಜಿಲ್ಲೆ ಮಹಾರಾಷ್ಟ್ರಕ್ಕೆ ಸೇರಬೇಕೆಂದು ನಿರ್ಣಯ ಮಾಡಿದ್ದಾರೆ. ಇವತ್ತು ಎಲ್ಲಿ ಗಡಿ ಭಾಗದಲ್ಲಿ ಬೆಳಗಾಂನಲ್ಲಿ ಸೇರತಕ್ಕಂಥ ಈ ಅಧಿವೇಶನದಲ್ಲಿ ಈಗಾಗಲೇ 1–2 ಸಲ ನಾವೂ ಮಾಡಿದ್ದೇವೆ. ಆದರೂ ಕೂಡ ಮಹಾರಾಷ್ಟ್ರ ಸರ್ಕಾರದವರು ಇದಕ್ಕೆ ಹೆಚ್ಚಿನ ಕಿರುಕುಳ ಕೊಡುತ್ತಿದ್ದಾರೆ. ಎಲ್ಲರೂ ಒಂದಾಗಿ ಪ್ರಧಾನ ಮಂತ್ರಿಗಳ ಬಳಿಗೆ ಹೋಗಿದ್ದಾರೆ. ಒಂದು affidavit ದಾಖಲು ಮಾಡಿದ್ದಾರೆ. ಮತ್ತೊಂದು affidavit ಹಾಕತಕ್ಕಂಥ ರೀತಿಯಲ್ಲಿ ಆಗುತ್ತಿದೆ. ಇಂಥ ಒಂದು ಸಂದರ್ಭದಲ್ಲಿ ಈ ದಿನ ನಾನು ಸಭಾನಾಯಕರಿಗೆ ಕೇಳಿಕೊಳ್ಳುತ್ತಿದ್ದೇನೆ. ಇವತ್ತು ಮಹಾಜನ